ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 31 | ಆಗಸ್ಟ್ 3, 1980 | ಬೆಲೆ : 50 ಪೈಸೆ

ಮಾತಿನ ಗುಂಡುಗಳು

ಉತ್ತರ ಕರ್ನಾಟಕದಲ್ಲಿ ನ್ಯಾಯಯುತ ಬೇಡಿಕೆಗಳನ್ನಿತ್ತು ಹೋರಾಡುತ್ತಲಿರುವ ರೈತರ ಮೇಲೂ, ಬೇರೆಬೇರೆಡೆಗಳಲ್ಲಿ ಬೆಲೆಏರಿಕೆ ವಿರುದ್ಧ ಪ್ರತಿಭಟಿಸುತ್ತಲಿರುವ ಜನತೆಯ ಮೇಲೂ ಪೋಲೀಸರ ಗುಂಡಿನ ಸುರಿಮಳೆ ಆಗುತ್ತಿದ್ದಂತೆಯೆ ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರ ಮಾತಿನ ಗುಂಡಿನ ಸುರಿಮಳೆಯೂ ಆಗುತ್ತಲಿದೆ,

ಕಾಂಗ್ರೆಸ್ ಸರಕಾರದ ಬಂಡವಾಳಶಾಹಿ ಪಥದ ಪರಿಣಾಮ, ಅಧಿಕಾರಿಗಳ ಅಸಡ್ಡೆ ಮತ್ತು ಸರಕಾರದ ವಿಫಲತೆ, ಎಲ್ಲೆಲ್ಲೂ ತಾಂಡವವಾಡುತ್ತಿರುವ ಭ್ರಷ್ಟಾಚಾರ, ಇದರೊಂದಿಗೆ ಗಗನಕ್ಕೇರಿರುವ ಬೆಲೆಗಳು ಇವೆಲ್ಲವುಗಳಿಂದ ರೈತರೂ, ಜನತೆಯೂ ಕಂಗೆಟ್ಟಿದೆ. ಅತೃಪ್ತಿಗೊಂಡ ಜನತೆಯನ್ನು ದುರಹಂಕಾರದಿಂದ ಕೆಲವು ಅಧಿಕಾರಿಗಳು ರೊಚ್ಚಿಗೆಬ್ಬಿಸಿ ಪರಿಸ್ಥಿತಿ ಹದಗೆಡುವಂತಾಗಿದೆ ಎಂಬುದನ್ನು ತಿಳಿಯದೆಯೋ ಅಥವಾ ತಿಳಿದೋ ಮರೆಮಾಚಿ ಗುಂಡೂರಾಯರು ರಾಜ್ಯದಲ್ಲಿ ಬೆಳೆಯುಬರುತ್ತಿರುವ ಚಳುವಳಿಯನ್ನು ಕೆಲವು ಗೂಂಡಾಗಳ ಪುಂಡಾಟಿಕೆ ಎಂದೂ, ಬೇರೆಡೆಗಳಿಂದ

ಸಂಪಾದಕೀಯ

ಯಾರುಯಾರೋ ಬಂದು ಅಸ್ಸಾಂ ಚಳುವಳಿಯ ರೂಪದ ಚಳುವಳಿಯನ್ನು ಈ ರಾಜ್ಯದಲ್ಲಿ ಬೆಳೆಸಲು ಸಂಚು ನಡೆಸುತ್ತಲಿರುವರೆಂದೂ ಹೇಳಿರುವುದು ಹಾಸ್ಯಾಸ್ಪದ ಮತ್ತು ಖಂಡನೀಯ.

ತಾವು ಮುಖ್ಯಮಂತ್ರಿಯಾದೊಡನೆ ಮಣ್ಣಿನ ಮಕ್ಕಳ ವಾದವನ್ನು ಎತ್ತಿಹಿಡಿದು, ಬಹಳಷ್ಟು ಢಂಬಾಚಾರದ ಮಾತುಗಳನ್ನಾಡಿದ ಗುಂಡೂರಾಯರೇ ಅಸ್ಸಾಂ ಚಳುವಳಿಯಂತಹ ಹೋರಾಟಕ್ಕೆ ಪ್ರೇರೇಪಣೆ ನೀಡಲು ಯತ್ನಿಸಿದ್ದು ಮತ್ತು ಅವರ ಪಕ್ಷದವರೇ ಎನಿಸಿಕೊಂಡಿರುವ ಗೂಂಡಾಗಳೇ ಎಲ್ಲೆಡೆಗಳಲ್ಲೂ ಪುಂಡಾಟಿಕೆ ನಡೆಸುತ್ತಲಿರುವುದು ಎಂಬುದನ್ನು ನೆನಪಿಸಿಕೊಡಬೇಕಾಗಿದೆ. ಮಲಪ್ರಭಾ ರೈತರ ಹೋರಾಟವು ಕಳೆದ ಎರಡು ವರ್ಷಗಳಿಂದ ಶಾಂತಯುತವಾಗಿ ನಡೆಯುತ್ತಲಿತ್ತು. ಗುಂಡೂರಾಯರೇ ಕೆಲವು ತಿಂಗಳುಗಳ ಹಿಂದೆ ನರಗುಂದಕ್ಕೆ ಹೋಗಿರುವಾಗ ಎರಡು ಸಾವಿರ ರೈತರು ಅವರೆದುರು ಶಾಂತವಾಗಿ ಪ್ರತಿಭಟನೆಮಾಡಿ ಮನವಿ ಇತ್ತಿದ್ದರು. ಕಳೆದ ಒಂದು ತಿಂಗಳಿನಿಂದ ಈ ಪ್ರದೇಶದ ಒಟ್ಟು ಐದು ಸಹಸ್ರ ರೈತರು ಸರದಿ ಅನ್ನಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಸರಕಾರಿ ಗುಪ್ತಚಾರಿ ವಿಭಾಗವು ಪರಿಸ್ಥಿತಿ ಬಗ್ಗೆ ವರದಿ ಕೊಡುತ್ತಾ ಬಂದಿದೆಯಂತೆ!

(ಕಡೇ ಪುಟ ನೋಡಿ)

ಶ್ರೀಲಂಕಾದಲ್ಲಿ ತುರ್ತುಸ್ಥಿತಿ ಜಾರಿ

ಸಾರ್ವಜನಿಕ ಭದ್ರತಾ ಕಾಯಿದೆಯ ಪ್ರಕಾರ ಶ್ರೀಲಂಕಾ ಸರ್ಕಾರವು ಜುಲೈ 16ರಂದು ರಾಷ್ಟ್ರದಾದ್ಯಂತ ತುರ್ತುಪರಿಸ್ಥಿತಿಯನ್ನು ಜಾರಿ ಮಾಡಿತು. ವಿರೋಧಪಕ್ಷಗಳ ನಾಯಕತ್ವದ "ರಾಜಕೀಯ ಉದ್ದೇಶ"ದ ಟ್ರೇಡ್‌ಯೂನಿಯನ್ ಸಾರ್ವಜನಿಕ ಮುಷ್ಕರದ ಸವಾಲನ್ನು ಎದುರಿಸಲು ಈ ಕ್ರಮ ಅಗತ್ಯವಾದಿತ್ತೆಂದು ಕಾರಣ ಹೇಳಲಾಗಿದೆ.

ಮುಷ್ಕರ ನಡೆಸುತ್ತಿರುವ ಕಾರ್ಮಿಕರ ಮೇಲೆ ತೀವ್ರ ಕಾನೂನು ಕ್ರಮಗಳನ್ನು ಕೈಗೊಳ್ಳಲು ಈ ಕಾಯಿದೆ ಅವಕಾಶಕೊಟ್ಟಿದೆ, ಮೀಸಲು ಪೋಲೀಸ್ ಮತ್ತು ಸಶಸ್ತ್ರ ಪಡೆಗಳನ್ನು ಪರಿಸ್ಥಿತಿ ನಿರ್ವಹಿಸಲು ಕರೆಯಲಾಗಿದೆ.

1977ರ ಜುಲೈ ಚುನಾವಣೆಯಲ್ಲಿ ಅಪಾರ ಬಹುಮತ ಪಡೆದಿದ್ದ ಅಧ್ಯಕ್ಷ ಜಯವರ್ಧನೆಯವರ ಸರ್ಕಾರವು ಈ ಕಾಯಿದೆಯ ಮೂಲಕ ಪೂರ್ಣ ಸರ್ವಾಧಿಕಾರವನ್ನು ಸ್ಥಾಪಿಸಿದೆ. ಕಳೆದ ತಿಂಗಳುತಾನೆ ಶ್ರೀಲಂಕಾದ ಪ್ರಧಾನಮಂತ್ರಿಯವರು, ದೇಶದ ಎಲ್ಲ ಕಾರ್ಮಿಕರಲ್ಲಿ ಶೇ. 75 ರಷ್ಟು ಮಂದಿ ಸರ್ಕಾರದ ಟ್ರೇಡ್ ಯೂನಿಯನ್‌ಗಳಿಗೆ ಸೇರಿದವರೆಂದು ಹೇಳಿಕೊಂಡಿದ್ದ ಉತ್ಪ್ರೇಕ್ಷಿತ ಮಾತಿಗೆ ಈ ಕ್ರಮ ವಿರೋಧವಾದಿದೆ,

ಈ ಕ್ರಮದ ಹಿಂದಿನ ನಿಜವಾದ ಕಾರಣವೆಂದರೆ, ಅಧ್ಯಕ್ಷ ಜಯವರ್ಧನೆ "ಬಹಿರಂಗ ಆರ್ಥಿಕತೆ" ನೀತಿಯನ್ನು ಘೋಷಿಸಿದ ನಂತರ ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಗಳೇ ಅಲ್ಲಿನ ಆರ್ಥಿಕತೆಯ ಮೇಲೆ ಪೂರ್ಣ ಹಿಡಿತ ಪಡೆದಿವೆ. ಎಲ್ಲ ಅಭಿವೃದ್ಧಿ ರಾಷ್ಟ್ರಗಳಲ್ಲಿ ಇರುವ ಹಾಗೆ, ಈ ಏಜೆನ್ಸಿಗಳು ಇಲ್ಲಿಯೂ "ಸ್ವತಂತ್ರ ಮಾರುಕಟ್ಟೆ ವ್ಯವಸ್ಥೆ, ಹೆಚ್ಚು ಗ್ರಾಹಕತೆ, ನಗರೀಕರಣ ಮತ್ತು ಅಸಮಾನತೆಯ ಬೆಳವಣಿಗೆ"ಗಳನ್ನು ಬಯಸುತ್ತವೆ,

ಸಧ್ಯದ ಸರ್ಕಾರದ ಮೊದಲ ನಿರ್ಧಾರಗಳಲ್ಲಿ ಒಂದೆಂದರೆ, ವಿಶ್ವ ಬ್ಯಾಂಕ್-ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ ಇನ್ನಷ್ಟು ಸಾಲ ಪಡೆಯಲು ಪ್ರಯತ್ನ ಮತ್ತು ಕರೆನ್ಸಿಯನ್ನು ಅರ್ಧಕ್ಕರ್ಧ ಅಪಮೌಲ್ಯ ಮಾಡಿದ್ದು, ಈ ವರ್ಷದ ಮಾರ್ಚಿಯಲ್ಲಿ ಸರ್ಕಾರವು 1000 ಮಿಲಿಯನ್ ರೂಪಾಯಿಗಳನ್ನು ಟ್ರೆಜರಿ ಬಿಲ್‌ಗಳ ರೂಪದಲ್ಲಿ ಹೊರಡಿಸಿತು, ವಿದೇಶಿ ಬ್ಯಾಂಕ್‌ಗಳು ಮತ್ತು ಇತರ ಸಂಸ್ಥೆಗಳಿಗೆ ಅದು 15,841 ಮಿಲಿಯನ್ ರೂಪಾಯಿಗಳನ್ನು ಕೊಡಬೇಕು,

(ಕಡೇ ಪುಟ ನೋಡಿ)

ರೈತ ಚಳುವಳಿ ಮತ್ತು ಬೆಲೆ ಏರಿಕೆ ವಿರುದ್ಧ ಹೋರಾಟದ ಮುನ್ನಡೆ

ಉತ್ತರ ಕರ್ನಾಟಕದಲ್ಲಿ ಪೋಲೀಸರಿಂದ ನರಮೇಧ

ಉತ್ತರ ಕರ್ನಾಟಕದ ರೈತರು ಮತ್ತು ಬೇಸಾಯ ಕೂಲಿಗಾರರು ಮತ್ತು ಬೆಲೆಏರಿಕೆ ವಿರುದ್ಧ ಪ್ರತಿಭಟಿಸಿದ ನಾಗರೀಕರ ಮೇಲೆ ಇಂದಿರಾ ಕಾಂಗ್ರೆಸ್ ಪಕ್ಷದ ಗುಂಡೂರಾವ್ ಸರ್ಕಾರವು ಹೂಡಿದ ಗೋಲಿಬಾರಿಗೆ ಒಂದು ವಾರದೊಳಗೆ ಒಟ್ಟು 18 ಜನ ಬಲಿಯಾಗಿದ್ದಾರೆ ಎಂದು ವರದಿಗಳು ತಿಳಿಸಿವೆ. ರೈತ ಚಳುವಳಿ ಮತ್ತು ಬೆಲೆ ಏರಿಕೆ ವಿರುದ್ಧ ಪ್ರತಿಭಟಿಸುತ್ತಲಿದ್ದ ಜನರ ಮೇಲೆ ಕಾಂಗ್ರೆಸ್ ಸರ್ಕಾರದ ಪೋಲೀಸರು ಮಾಡಿದ ಹದ್ದುಮೀರಿದ ವರ್ತನೆಯಿಂದಾಗಿ ನೂರಾರು ಜನ ಗಾಯಗೊಂಡಿದ್ದಾರಲ್ಲದೆ ಹಲವರ ಸ್ಥಿತಿ ಚಿಂತಾಜನಕವಾಗಿದೆ. ನೂರಾರು ಮಂದಿಯ ಬಂಧನವಾಗಿದೆ.

ತಮ್ಮ ನ್ಯಾಯವಾದ ಬಹುಕಾಲದ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕೆಂದು ಶಾಂತರೀತಿಯಿಂದ ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದ ರೈತರಿಗೆ ಇದುವರೆಗಿನ ಸರ್ಕಾರಗಳು ಕೊಟ್ಟ ಉತ್ತರ ಶೂನ್ಯ. ಇದರಿಂದಾಗಿ ರೈತರ ಪಾಲಿಗೆ ಶೂಲವಾಯಿತು. ಅವರು ಮಾಡಿದಸಾಲ, ಅವರ ಸಾಲದ ಮೇಲಿನ ಬಡ್ಡಿಯು ಬೆಟ್ಟವಾಯಿತು. ರೈತ ಕೊಳ್ಳುವ ಎಲ್ಲಾ ಪದಾರ್ಥಗಳ ಬೆಲೆ ಗಗನಕ್ಕೇರಿದರೆ, ಆತ ಬೆಳೆದ ಉತ್ಪನ್ನಗಳ ಬೆಲೆ ಪಾತಾಳಕ್ಕೆ ಕುಸಿಯಿತು. ಇದರೊಂದಿಗೆ ನೀರಾವರಿ ತೆರಿಗೆ, ಬೆಟರ್‌ಮೆಂಟ್ ಲೆವಿಯನ್ನು ಮಿತಿಮೀರಿ ಮತ್ತು ಕ್ರಮ ತಪ್ಪಿ ಹೇರಿರುವುದರಿಂದ ಮಲಪ್ರಭಾ ಯೋಜನೆಯ ನೀರಾವರಿ ಪ್ರದೇಶದ ರೈತರ ಸಮಸ್ಯೆ ಗಂಭೀರವಾಗುವಂತೆ ಮಾಡಿತು,

ಕಳೆದ ಎರಡುವರ್ಷಗಳಿಂದ ಹೋರಾಡುತ್ತಾ ಬಂದಿರುವ ಈ ಪ್ರದೇಶದ ರೈತರು ಮತ್ತು ಕೂಲಿಗಾರರೂ ಕಳೆದ ಒಂದು ತಿಂಗಳಿನಿಂದ ಉಪವಾಸ ಸತ್ಯಾಗ್ರಹ, ಮೆರವಣಿಗೆ, ಸರಕಾರಿ ಅಧಿಕಾರಿಗಳಿಗೆ ತಮ್ಮ ನ್ಯಾಯಯುತ ಬೇಡಿಕೆಗಳ ಬಗ್ಗೆ ಮನವಿ ಅರ್ಪಣೆ - ಇವನ್ನೆಲ್ಲಾ ನಡೆಸುತ್ತಾ ಬಂದರು. ಕಳೆದ ಒಂದು ತಿಂಗಳಿನಲ್ಲಿ ಸುಮಾರು 5000 ರೈತರು ಸರದಿ ಅನ್ನಸತ್ಯಾಗ್ರಹದಲ್ಲಿ ಭಾಗವಹಿಸಿದರೂ ಸರಕಾರ ಅಥವಾ ಅಧಿಕಾರಿಗಳ ಕಣ್ಣು ತೆರೆಯಲಿಲ್ಲ. ಈ ಸಂದರ್ಭದಲ್ಲಿ ಮಲಪ್ರಭಾ ನೀರಾವರಿ ಪ್ರದೇಶದ ನರಗುಂದ, ನವಲಗುಂದ (ಧಾರವಾಡ ಜಿಲ್ಲೆ) ಮತ್ತು ಸೌಂದತ್ತಿ (ಬೆಳಗಾವಿ ಜಿಲ್ಲೆ) ತಾಲ್ಲೂಕುಗಳ ರೈತ ಪ್ರತಿನಿಧಿಗಳು ಒಂದುಸೇರಿ ಹೋರಾಟವನ್ನು ಜಂಟಿಯಾಗಿ ಮತ್ತು ವ್ಯವಸ್ಥಿತವಾಗಿ ನಡೆಸುವುದಕ್ಕೆ ಒಂದು ಸಮನ್ವಯ ಸಮಿತಿಯನ್ನು ನಡೆಸಿದರು. ಎಸ್. ಎಫ್. ಐ. ರಾಜ್ಯಸಮಿತಿಯ ಮಾಜೀ ಅಧ್ಯಕ್ಷ, ಪ್ರಾಂತ ರೈತಸಂಘದ ಮುಖ್ಯ ಕಾರ್ಯಕರ್ತ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದವರಾದ ಕಾಂ. ವಿ. ಎಸ್. ಹಳಕಟ್ಟಿ ಅವರು ಈ ಸಮನ್ವಯ ಸಮಿತಿಯ ಒಬ್ಬ ಪ್ರಮುಖ ಮುಖಂಡ ಮತ್ತು ಸಂಚಾಲಕರಾಗಿದ್ದವರು, ನರಗುಂದಲದಲ್ಲಿ ರೈತಸಂಘಟನೆ ಹೋರಾಟದಲ್ಲಿ ಸಕ್ರೀಯಪಾತ್ರವಹಿಸುತ್ತಾ ಬಂದಿದೆ. ಈ ಸಮನ್ವಯ ಸಮಿತಿಯು 21-7-80 ರಂದು ನರಗುಂದ, ನವಲಗುಂದ, ಸೌಂದತ್ತಿ ಮತ್ತು ರಾಮದುರ್ಗ ತಾಲ್ಲೂಕುಗಳಲ್ಲಿ ಬಂದ್ ಆಚರಣೆಗೆ ಕರೆ ಇತ್ತಿತು. ಅಂದೇ ಗದದಿನಲ್ಲಿ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಬಂದ್‌ಗಳಿಗೆ ಗದದಿನ ಜನತೆ ಕರೆ ಇತ್ತಿತು.

ಅಂದು ಅಂದರೆ 21ನೇ ಸೋಮವಾರ ಎಲ್ಲಾ ಕಡೆಗಳಲ್ಲೂ ಬಂದ್ ಶಾಂತಯುತವಾಗಿ ನಡೆಯುತ್ತಲಿತ್ತು, ನರಗುಂದದಲ್ಲಿ 33 ಹಳ್ಳಿಗಳಿಂದ ಬಂದ ಸುಮಾರು 5000ಕ್ಕಿಂತಲೂ ಹೆಚ್ಚು ಮಂದಿಯಿದ್ದ ಮೆರವಣಿಗೆಯು ತಹಸಿಲ್ದಾರರವರ ಕಛೇರಿಯ ಸಮೀಪ ಬಂತು, ಧಾರವಾಡ ಜಿಲ್ಲಾ ರೈತ ಸಂಘದ ಸಂಚಾಲಕ ಕಾಂ. ವಲ್ಲೇದ ಅವರ ಪ್ರತ್ಯಕ್ಷದರ್ಶಿ ವರದಿ ಪ್ರಕಾರ ಸುಮಾರು 50 ಮಂದಿ ಪೋಲೀಸರು ತಹಸಿಲ್ದಾರರನ್ನು ಆಫೀಸು ಒಳಗೆ ಬಿಟ್ಟು, ಆಮೇಲೆ ಮೆರವಣಿಗೆಕಾರರ ಮೇಲೆ ಲಾಠಿ ಚಾರ್ಜು, ಅಶ್ರುವಾಯು ಪ್ರಯೋಗ ಮಾಡಿದರು, ಹುಸಿಗುಂಡುಗಳನ್ನು ಹಾರಿಸಿದರು. ಆಗ ನೂಕುನುಗ್ಗಲು ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ನರಗುಂದದ ಪೋಲೀಸ್ ಇನ್ಸ್‌ಪೆಕ್ಟರು ಅನ್ನಸತ್ಯಾಗ್ರಹಟೆಂಟ್‌ನಲ್ಲಿ ಕುಳಿತಿದ್ದ ಚಿಕ್ಕನರಗುಂದದ ಯುವಕ ರೈತ ಈರಪ್ಪ ಬಸಪ್ಪ ಕಡ್ಲಿಕೊಪ್ಪನನ್ನು ಎದೆಯ ಮೇಲೆ ಗುಂಡಿಟ್ಟು ಕೊಂದರು, ಇದರಿಂದ ರೈತರು ಉದ್ರೇಕಗೊಂಡರು. ಪರಿಣಾಮವಾಗಿ ಹಿಂಸಾತ್ಮಕ ಘಟನೆಗಳು, ಗೋಲಿಬಾರ್ ನಡೆಯಿತು. ಸಾವು, ನೋವು, ಬಂಧನ, ಸ್ವತ್ತು ಹಾನಿಗಳಾಯಿತು,

ಮಲಪ್ರಭಾ ನೀರಾವರಿ ಪ್ರದೇಶದ ರೈತರ ಮೇಲಿನ ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸಿ ಮತ್ತು ಅವರ ಬೇಡಿಕೆಗಳಿಗೆ ಬೆಂಬಲ ಮತ್ತು ರಾಜ್ಯಾದ್ಯಂತ ವ್ಯಾಪಕ ಚಳುವಳಿ ಬೆಳೆಯ

(ಕಡೇ ಪುಟ ನೋಡಿ)

ಜಿಲ್ಲಾಧಿಕಾರಿ ಎದುರು ಸತ್ಯಾಗ್ರಹಕ್ಕೆ ಮಂಗಳೂರು ಎಸ್.ಎಫ್.ಐ. ನಿರ್ಧಾರ

ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾದ ಮಂಗಳೂರು ತಾಲ್ಲೂಕು ಸಮಿತಿ ಸಭೆಯು ತಾ. 20-7-80 ರಂದು ಜರುಗಿತು. ಅಸ್ಸಾಂ, ತ್ರಿಪುರಾ ಮುಂತಾದ ಈಶಾನ್ಯ ಭಾರತದ ರಾಜ್ಯಗಳಲ್ಲಿ ನಡೆಯುತ್ತಿರುವ ಪ್ರತ್ಯೇಕತಾ ಚಳುವಳಿಯ ಬಗ್ಗೆ ಚರ್ಚಿಸಿದ ಸಮಿತಿಯು ಭಾರತದ ಐಕ್ಯತೆಗೆ ಮಾರಕವಾಗಿರುವ ಈ ಚಳುವಳಿಯ ಬಗ್ಗೆ ಸಮಿತಿ ಕಳವಳ ವ್ಯಕ್ತಪಡಿಸಿತು. ಹಾಗೂ ಅಲ್ಲಿ ಎಸ್. ಎಫ್. ಐ. ಹಾಗೂ ಇತರ ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ಪ್ರತಿಗಾಮಿ ಶಕ್ತಿಗಳು ನಿರಂತರವಾಗಿ ನಡೆಸುತ್ತಿರುವ ಹಲ್ಲೆಯನ್ನು ಖಂಡಿಸಲಾಯಿತು. ಮತ್ತು ಕೇಂದ್ರಸರಕಾರವು ಕೂಡಲೇ ಮಧ್ಯೆ ಪ್ರವೇಶಿಸಿ ಶಾಂತಿಯುತವಾದಿ ಮಾತುಕತೆಗಳ ಮೂಲಕ ಅಸ್ಸಾಂ ಸಮಸ್ಯೆಯನ್ನು ಇತ್ಯರ್ಥಗೊಳಿಸಬೇಕೆಂದು ಒತ್ತಾಯಿಸಲಾಯಿತು.

ಬೆಲೆಏರಿಕೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಸಮಿತಿಯು ಬೆಲೆ ಏರಿಕೆಯನ್ನು ವಿರೋಧಿಸಿ ಹೋರಾಡುವ ಎಲ್ಲಾ ಪ್ರಗತಿಪರ ಕಾರ್ಯಕ್ರಮಗಳಿಗೆ ಬೆಂಬಲ ಸಾರಲಾಯಿತು.

ಈ ವರ್ಷ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ನಿಲಯಕ್ಕೆ ಕೆಲವೊಂದು ನೆಪವೊಡ್ಡಿ ಪ್ರವೇಶ ನಿರಾಕರಿಸಲ್ಪಟ್ಟ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವರ್ಷವೂ ಪ್ರವೇಶ ನೀಡಬೇಕೆಂದು ಜಿಲ್ಲಾಧಿಕಾರಿಯವರನ್ನು ಒತ್ತಾಯಿಸಲಾಯಿತು. ಮತ್ತು ಕೂಡಲೇ ಈ ಸಮಸ್ಯೆ ಪರಿಹಾರವಾಗದಿದ್ದಲ್ಲಿ, ಜಿಲ್ಲಾಧಿಕಾರಿ ಕಛೇರಿ ಮುಂದೆ ಅನ್ನಸತ್ಯಾಗ್ರಹ ಕೈಗೊಳ್ಳಲು ನಿರ್ಧರಿಸಲಾಯಿತು.

1980-81ನೆಯ ವರ್ಷಕ್ಕೆ ಮಂಗಳೂರು ತಾಲ್ಲೂಕು ಸಮಿತಿಯ ಹೊಸ ಕಾರ್ಯದರ್ಶಿಯನ್ನಾಗಿ ಎ. ಉಮೇಶ್ ಭಂಡಾರಿ ಅವರನ್ನು ಆರಿಸಲಾಯಿತು. ಜೊತೆ ಕಾರ್ಯದರ್ಶಿಯಾಗಿ ಸುನಿಲ್ ಪಾಟೀಲ್ ಮತ್ತು ಉಪಾಧ್ಯಕ್ಷರನ್ನಾಗಿ ಬಾಲಕೃಷ್ಣ ಶೆಟ್ಟಿಗಾರ್ ಅವರನ್ನು ಆಯ್ಕೆಮಾಡಲಾಯಿತು.

ವಿದ್ಯಾರ್ಥಿಗಳ ಬೇಡಿಕೆ ಈಡೇರಿಕೆ:

ಮಂಗಳೂರಿನ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ನಿಲಯಗಳಲ್ಲಿ ಸುಮಾರು 30 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅವರು ಕಳೆದ ಪರೀಕ್ಷೆಯಲ್ಲಿ ಕೆಲವು ವಿಷಯಗಳಲ್ಲಿ ಫೈಲಾಗಿದ್ದಾರೆ ಎಂಬ ಕಾರಣಕ್ಕಾಗಿ ಅವರಿಗೆ ಹಾಸ್ಟೆಲ್‌ಗೆ ಪ್ರವೇಶವನ್ನು ನಿರಾಕರಿಸಲಾಗಿತ್ತು. ಕಾಲೇಜಿನಲ್ಲಿ ಮುಂದಿನ ತರಗತಿಗೆ ಪ್ರಮೋಶನ್ ಪಡೆದಿರುವ ಈ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಸ್ಟೆಲ್‌ನಲ್ಲಿ ಪ್ರವೇಶ ಸಿಗದೆ ತಮ್ಮ ವಿದ್ಯಾಭ್ಯಾಸವನ್ನೇ ನಿಲ್ಲಿಸುವ ಸಂದರ್ಭ ಬಂದಾಗ ಎಸ್. ಎಫ್. ಐ. ಮಂಗಳೂರು ತಾಲ್ಲೂಕು ಸಮಿತಿಯು ಮಧ್ಯೆ ಪ್ರವೇಶಿಸಿ ಈ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರವೇಶ ಕೊಡುವಂತೆ ಜಿಲ್ಲಾಧಿಕಾರಿಯವರನ್ನು ಮನವಿ ಮೂಲಕ ಒತ್ತಾಯಿಸಿತ್ತು. ಜಿಲ್ಲಾಧಿಕಾರಿಯವರು ಯಾವುದೇ ಕ್ರಮಕೈಗೊಳ್ಳದಿದ್ದುದರಿಂದ ಕಳೆದ ತಾ. 25-7-80ರಿಂದ ಜಿಲ್ಲಾಧಿಕಾರಿ ಕಛೇರಿ ಮುಂದೆ ಅನ್ನಸತ್ಯಾಗ್ರಹವನ್ನು ಕೈಗೊಳ್ಳಲು ನಿರ್ಧರಿಸಿದ ಸಮಿತಿಯು ಈ ಬಗ್ಗೆ ಹೋರಾಟಕ್ಕಾಗಿ ವಿದ್ಯಾರ್ಥಿಗಳನ್ನು ಸಂಘಟಿಸಿತು. ಹೋರಾಟದ ಬಿಸಿ ತಾಗಿದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಮಧ್ಯೆ ಪ್ರವೇಶಿಸಿ ನಮ್ಮ ಬೇಡಿಕೆಯನ್ನು ಅಂಗೀಕರಿಸಿ ಪ್ರವೇಶ ನಿರಾಕರಿಸಲ್ಪಟ್ಟ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರವೇಶ ಕೊಡುವುದಾಗಿ ತಿಳಿಸಿದರು ಮತ್ತು ಅವರಿಗೆ ಈಗಾಗಲೇ ಹಾಸ್ಟೆಲಿಗೆ ಪ್ರವೇಶ ನೀಡಲಾಗಿದೆ. ಆದ್ದರಿಂದ ಯೋಜಿತ ಅನ್ನಸತ್ಯಾಗ್ರಹವನ್ನು ಎಸ್. ಎಫ್. ಐ. ತಾಲ್ಲೂಕು ಸಮಿತಿಯು ಹಿಂತೆಗೆದುಕೊಂಡಿದೆ. ಈ ಬಗ್ಗೆ ಹೋರಾಟಕ್ಕೆ ಎಸ್. ಎಫ್. ಐ. ತಾಲ್ಲೂಕು ಸಮಿತಿಯೊಂದಿಗೆ ಸಹಕರಿಸಿದ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಅಭಿನಂದಿಸುತ್ತೇವೆ. ಹಾಗೂ ಮಧ್ಯೆ ಪ್ರವೇಶಿಸಿದ ಜಿಲ್ಲಾಧಿಕಾರಿಯವರಿಗೆ ಕೃತಜ್ಞತೆಯನ್ನಿಯುತ್ತೇವೆ.

ಬೆಲೆಏರಿಕೆಯ ವಿರುದ್ಧ ಆಗಸ್ಟ್ 8 ರಂದು ಮಂಗಳೂರಿನಲ್ಲಿ ಯೋಜಿಸಲಾಗಿರುವ ಕೃಷಿಕಾರ್ಮಿಕರ ಹಾಗೂ ಸಾರ್ವಜನಿಕರ ಪ್ರದರ್ಶನಕ್ಕೆ ಎಸ್. ಎಫ್. ಐ. ಮಂಗಳೂರು ತಾಲ್ಲೂಕು ಸಮಿತಿ ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತದೆ ಎಂಬುದಾಗಿ ಎಸ್. ಎಫ್. ಐ ತಾಲ್ಲೂಕು ಕಾರ್ಯದರ್ಶಿ ಉಮೇಶ ಭಂಡಾರಿ ಹೇಳಿಕೆ ಇತ್ತಿರುವರು.

○

ಕೆನರಾ ವರ್ಕ್‌ಷಾಪಿನ ಕೆಲಸಗಾರರ ಮಹಾ ಸಭೆ

ತಾ. 22-7-80ರಂದು ಮಂಗಳೂರು ಕೆನರಾ ವರ್ಕ್‌ಶಾಪಿನ ಎಲ್ಲಾ ಕೆಲಸಗಾರರ ಮಹಾ ಸಭೆಯು ಶ್ರೀಯುತ ಬಿ.ಎಲ್. ಶಿವರಾಮರವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರಂಭದಲ್ಲಿ ಶ್ರೀಯುತ ಯು. ಅಚ್ಯುತ ಮೊಯ್ಲಿಯವರು ಸ್ವಾಗತಿಸಿದರು.

ಕಾಂ. ಸಿ. ನಾರಾಯಣರವರು ಸಭೆ ಕರೆದ ಉದ್ದೇಶವನ್ನು ವಿವರಿಸುತ್ತಾ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿರುವ ನಿತ್ಯೋಪಯೋಗಿ ವಸ್ತುಗಳ ಬೆಲೆಯು ಬಡ ಕಾರ್ಮಿಕರ ನಿಜ ಕೂಲಿಯು ಕಡಿಮೆಯಾಗುವಂತೆ ಮಾಡಿದೆ. ಈ ಪರಿಸ್ಥಿತಿಯು ಕಾರ್ಮಿಕರನ್ನು ಮತ್ತೆ ಹೋರಾಟಕ್ಕೆ ಸನ್ನದ್ಧರಾಗುವಂತೆ ಮಾಡಿದೆ. ಈ ಸಂದರ್ಭದಲ್ಲಿ ಕಾರ್ಮಿಕ ಪ್ರತಿನಿಧಿಗಳು ಮಾಲಕ ಪ್ರತಿನಿಧಿಗಳೊಡನೆ ನಡೆಸಿದ ಮಾತುಕತೆಯ ಪರಿಣಾಮವಾಗಿ 2 ತಿಂಗಳೊಳಗೆ ಕಾರ್ಮಿಕರ ವೇತನದ ಪುನರ್‌ಪರಿಶೀಲನೆ ನಡೆಸಿ ಸೂಕ್ತ ಪರಿಹಾರವನ್ನು ನೀಡುವ ಭರವಸೆಯೊಂದಿಗೆ ಸಂಸ್ಥೆಯ ಅಭಿವೃದ್ಧಿಗೆ ಕಾರ್ಮಿಕರ ಸಹಕಾರ ಅಪೇಕ್ಷಿಸಿದನ್ನು ಸಭೆಗೆ ವಿವರಿಸಿದರು. ಕಾರ್ಮಿಕರ ಹಕ್ಕನ್ನು ಕಸಿದುಕೊಂಡು ತಮ್ಮ ಅಗತ್ಯ ಬೇಡಿಕೆಗಳಿಗಾಗಿ ಹೋರಾಟ ಮಾಡುವುದನ್ನು ತಡೆಗಟ್ಟಲು ರಾಜ್ಯಸರಕಾರವು ಜಾರಿಗೆ ತರಲಿರುವ ಅಗತ್ಯಸೇವಾ ಮಸೂದೆಯ ಅಪಾಯವನ್ನು ಸಭೆಗೆ ಮನದಟ್ಟು ಮಾಡುತ್ತಾ ಇಂತಹ ಕರಾಳ ಶಾಸನವನ್ನು ತಡೆಗಟ್ಟಲು ಆಗಸ್ಟ್ 18ರಂದು ಕರ್ನಾಟಕದಾದ್ಯಂತ ನಡೆಯಲಿರುವ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲವನ್ನು ಯಾಚಿಸಿದರು.

ಸರಕಾರದ ಕಾರ್ಮಿಕ ವಿರೋಧಿ ನೀತಿ ಹಾಗೂ ಬೆಲೆ ಏರಿಕೆಯನ್ನು ತಡೆಗಟ್ಟಲು ಸಂಘಟಿತ ಕಾರ್ಮಿಕರ ಹೋರಾಟವೇ ಮಾರ್ಗ ಎಂಬುದನ್ನು ಶ್ರೀ ಕೆ. ಶಂಕರಕದ್ರಿಯವರು ಸಭೆಗೆ ವಿವರಿಸಿದರು.

ಬೆಲೆ ಏರಿಕೆಯಂತಹ ಕಠಿಣ ಪರಿಸ್ಥಿತಿಯಲ್ಲಿ ಸಂಸ್ಥೆಯ ಮಾಲೀಕ ಪ್ರತಿನಿಧಿಗಳು ಇತ್ತ ಭರವಸೆ ಹಾಗೂ ಕಾರ್ಮಿಕರ ಮೇಲಿನ ಸಹಾನುಭೂತಿಗಾಗಿ ಸಭಾಧ್ಯಕ್ಷ ಬಿ.ಎಲ್. ಶಿವರಾಮರವರು ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು. ಶ್ರೀಯುತ ಕೆ.ಎಸ್. ಶ್ರಿಯಾನ್‌ರವರು ಸಭೆಗೆ ಧನ್ಯವಾದಗಳನ್ನು ಅರ್ಪಿಸಿದರು. ●

ಬಾಡಿಗೆದಾರನ ಮೇಲೆ ಮನೆಮಾಲೀಕರ ದಾಳಿ

ಮಂಗಳೂರಿನ ಜಪ್ಪುಕುಡುಪಾಡಿಯ ಎಂ. ಆರ್. ಕಾಂಪೌಂಡಿನಲ್ಲಿ ವಾಸಿಸುವ ಶ್ರೀ ಬಿ. ಚಂದ್ರಶೇಖರ ಅವರ ಮನೆಯ ಮೇಲೆ ಶೀನ ಎಮ್. ಬಂಗೇರ ಮತ್ತು ದಯಾನಂದ ಶೆಟ್ಟರ್ ಅವರು ಅಕ್ರಮವಾಗಿ ದಾಳಿ ಮಾಡಿದ್ದಾರೆ. 28-6-80ರಂದು ಮನೆಯಲ್ಲಿ ಗಂಡಸರಿಲ್ಲದ ವೇಳೆಯಲ್ಲಿ ಆರೋಪಿಗಳು ಮಾರಕಾಸ್ತ್ರಗಳೊಂದಿಗೆ ದಾಳಿ ನಡೆಸಿ, ಅಲ್ಲಿದ್ದ ಮಹಿಳೆಯನ್ನು ಥಳಿಸಿದ್ದಾರೆ. ಈ ಬಗ್ಗೆ ಚಂದ್ರಶೇಖರ ಅವರು ಪೋಲೀಸರಿಗೆ ಮತ್ತು ನ್ಯಾಯಾಲಯಕ್ಕೆ ದೂರು ನೀಡಿದ್ದಾರೆ. ●

ಮಾಲೀಕರಿಂದ ಕೂಲಿಗಾರನ ಕೊಲೆ

ಸಕಲೇಶಪುರದ ಬಳಿಯ ಆದರವಳ್ಳಿ ತೋಟದ ಮಾಲೀಕ ಅಬುಬೇಕರ್ ತನ್ನ ತೋಟದ ಹಲಸಿನ ಮರ ಹತ್ತಿ ಹಣ್ಣು ಕುಯ್ಯುತ್ತಿದ್ದ ರಾಜಪ್ಪ ಎಂಬ ರೈತ ಕೂಲಿಗಾರನನ್ನು ಮರದ ಮೇಲಿರುವಾಗಲೇ ಗುಂಡಿಕ್ಕಿ ಕೊಂದಿದ್ದಾರೆ. ಬಡಜನರ ದುಡಿಮೆಯಿಂದ ಕೊಬ್ಬಿದ ಶ್ರೀಮಂತರು ಕೂಲಿಗಾರರ ಜೀವದ ಬಗ್ಗೆ ತಳೆದಿರುವ ಲಘು ಧೋರಣೆಯನ್ನು ಇದು ತೋರಿಸುತ್ತದೆ. ಈ ಘಟನೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಕಲೇಶಪುರ ಸಮಿತಿ ತೀವ್ರವಾಗಿ ಖಂಡಿಸಿದೆ.

ಈ ಕೊಲೆಯ ತನಿಖೆ ನಡೆಸಿದ ಸಕಲೇಶಪುರ ಪೋಲೀಸ್ ಅಧಿಕಾರಿಗಳು, ರಾಜಪ್ಪನ ಬಂಧುಗಳು ಮತ್ತು ಸಾಕ್ಷಿಗಳೊಡನೆ ಕೆಟ್ಟದಾಗಿ ನಡೆದುಕೊಂಡಿರುವುದನ್ನು ಅಲ್ಲಿಗೆ ಭೇಟಿಯಿತ್ತ ನಮ್ಮ ಪಕ್ಷದ ಕಾರ್ಯಕರ್ತರು ಗಮನಿಸಿದ್ದಾರೆ. ಹಣ ಮತ್ತು ಪ್ರಭಾವದಿಂದ ಕೊಲೆಯನ್ನು ಬೇರೆ ರೀತಿ ತಿರುಚಬಹುದು ಎಂಬ ಭೀತಿಯಿದೆ. ಆದ್ದರಿಂದ ಕೊಲೆಪ್ರಕರಣವನ್ನು ಸಿ. ಒ. ಡಿ ಗೆ ಒಪ್ಪಿಸಬೇಕೆಂದು ಪಕ್ಷದ ಸಮಿತಿ ಒತ್ತಾಯಿಸಿದೆ.

ಕೂಲಿಯೊಬ್ಬನ ಜೀವಕ್ಕೆ ಇಷ್ಟೊಂದು ಬೆಲೆ ಏಕೆ ಎನ್ನುವ ಧೋರಣೆಯಲ್ಲಿ ಸಕಲೇಶಪುರದ ಸರ್ಕಲ್ ಇನ್ಸ್‌ಪೆಕ್ಟರ್ ವಕೀಲರ ಮುಂದೆ ಮಾತನಾಡಿದರೆಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದನ್ನೂ ಸಮಿತಿ ಖಂಡಿಸುತ್ತದೆ.

ಕೊಲೆಗಡುಕ ಅಬುಬೇಕರನಿಗೆ ಶಿಕ್ಷೆಯಾಗಿ ಮೃತನಾದ ರಾಜಪ್ಪನ ಕುಟುಂಬಕ್ಕೆ ಪರಿಹಾರ ಕೊಡಲೆಂದು ಪಕ್ಷದ ಸಮಿತಿ ರಾಜ್ಯಸರ್ಕಾರವನ್ನು ಒತ್ತಾಯಿಸುತ್ತದೆ.

●

ಬಸ್ ದರ ಏರಿಕೆ ವಿರುದ್ಧ ಪ್ರತಿಭಟನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿವಮೊಗ್ಗ ನಗರ ಸಮಿತಿಯು ನಗರದ ಬಸ್‌ಸ್ಟ್ಯಾಂಡ್ ಬಳಿ ಬಸ್ ದರ ಏರಿಕೆಯ ವಿರುದ್ಧ ಪ್ರತಿಭಟಿಸಿ ಧರಣಿ ಮುಷ್ಕರವನ್ನು ತಾ. 20.7.80 ನೇ ಭಾನುವಾರ ನಡೆಸಿತು. ಈ ಧರಣಿ ಮುಷ್ಕರದಲ್ಲಿ 25 ಮಂದಿ ಭಾಗವಹಿಸಿದ್ದರು. ಪಕ್ಷದ ನಗರ ಸಮಿತಿ ಕಾರ್ಯದರ್ಶಿ ಎಸ್.ಬಿ. ಶಿವಶಂಕರ ಮತ್ತು ಯುವಜನ ಸಂಘಟನೆಯ ಜಿಲ್ಲಾ ಸಂಚಾಲಕರಾದ ಆರ್. ಗೋಪಾಲ್ ನಾಯಕ ವಹಿಸಿದ್ದರು. ಸರಕಾರ ಎಚ್ಚೆತ್ತು ಮಾಲೀಕರು ಎಚ್ಚೆತ್ತು ಕೂಡಲೇ ಬಸ್ ದರ ಇಳಿಸಬೇಕು. ಇಲ್ಲದಿದ್ದರೆ ಮುಂದೆ ಅಹಿತಕರ ಘಟನೆಗಳು ನಡೆಯಲಿದ್ದು ಸರ್ಕಾರ ಮತ್ತು ಮಾಲೀಕರೇ ಹೊಣೆಯಾಗಬೇಕಾದೀತೆಂದು ಮುಷ್ಕರಗಾರರು ಎಚ್ಚರಿಸಿದರು. ಕೊನೆಯಲ್ಲಿ ಟಿ.ಕೆ. ಕೋಟೇಶ್ವರವರಿಂದ ಕ್ರಾಂತಿಗೀತೆಯೊಂದಿಗೆ ಧರಣಿಮುಷ್ಕರ ಮುಕ್ತಾಯವಾಯಿತು.

●

ತ್ರಿಪುರಾದಲ್ಲಿನ

ಪ್ರತಿಗಾಮಿ ಪ್ರಯತ್ನ ಸೋಲಿಸಲು ಎಡ ಪಕ್ಷಗಳ ಕರೆ

ತ್ರಿಪುರ ರಾಜ್ಯದಲ್ಲಿನ ಎಡಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಸರ್ಕಾರವನ್ನು ಉರುಳಿಸುವ ಹಾಗೂ ರಾಷ್ಟ್ರದ ಐಕ್ಯತೆಗೆ ಭಂಗ ತರುವ ಪ್ರಯತ್ನದ 'ಅಮ್ರ ಬಂಗಾಲಿ' ಹಾಗೂ ಸ್ಥಳೀಯ ಕಾಂಗ್ರೆಯ ಯತ್ನಗಳನ್ನು ವಿಫಲಗೊಳಿಸಬೇಕೆಂದು ಸಂಸತ್ತಿನ ವಾಮಪಂಥೀಯ ಪಕ್ಷಗಳಾದ ಸಿ.ಪಿ ಐ (ಎಂ.), ಸಿ.ಪಿ ಐ., ಫಾರ್ವರ್ಡ್ ಬ್ಲಾಕ್ ಹಾಗೂ ಆರ್.ಎಸ್.ಪಿ. ಪಕ್ಷಗಳು ಸಂಯುಕ್ತವಾಗಿ ಕರೆಕೊಟ್ಟಿವೆ.

ಈ ಪಕ್ಷಗಳ ಪರವಾಗಿ ಸಂಸತ್ ಸದಸ್ಯ ಕಾಂ. ಹರ್‌ಕಿಶನ್ ಸಿಂಗ್ ಸುರ್ಜಿತ್ ಅವರು ಒಂದು ಪತ್ರಿಕಾ ಹೇಳಿಕೆ ನೀಡಿ, 'ಅಮ್ರ ಬಂಗಾಲಿ' ಸ್ಥಳೀಯ ಕಾಂಗ್ರೆಪಕ್ಷ ಒಂದುಗೂಡಿ, ಸಾಮರಸ್ಯದಿಂದ ಬದುಕುತ್ತಿರುವ ಬಂಗಾಲಿಗಳು ಮತ್ತು ಗಿರಿಜನರ ನಡುವೆ ಒಡಕು ತರುವ ಕ್ಷುದ್ರಯತ್ನ ಮಾಡುತ್ತಿವೆ ಎಂದಿದ್ದಾರೆ. ಜನ ವಿರೋಧಿ ಸಂಘಟನೆಗಳಾದ 'ಅಮ್ರಬಂಗಾಲಿ' ಮತ್ತು ಕಾಂಗ್ರೆಗೆ ಸಾಮ್ರಾಜ್ಯಶಾಹಿಗಳು ಮತ್ತು ಕ್ರಿಶ್ಚಿಯನ್ ಮಿಶನರಿಗಳು ಹಣದ ಹೊಳೆ ಹರಿಸುವುದರ ಮೂಲಕ ಭಾರತದ ಒಗ್ಗಟ್ಟನ್ನು ಒಡೆಯುವ ಮತ್ತು ಜನರಿಂದ ಆಯ್ಕೆಯಾದ ಸಿ.ಪಿ.ಎಂ. ನೇತೃತ್ವದ ವಾಮಪಂಥೀಯ ಸರ್ಕಾರ ಉರುಳಿಸುವ ಕಾರ್ಯದಲ್ಲಿ ತೊಡಗಿರುವುದು ಸ್ಪಷ್ಟ ಎಂದೂ ಸುರ್ಜಿತ್‌ಸಿಂಗ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಅಮ್ರಬಂಗಾಲಿ' ಮತ್ತು ಸ್ಥಳೀಯ ಕಾಂಗ್ರೆ ಸಂಘಟನೆಗಳ ಈ ದೇಶ ವಿರೋಧಿ ಕೃತ್ಯಗಳನ್ನು ನಾಡಿನ ಎಲ್ಲ ಪ್ರಜಾಪ್ರಭುತ್ವವಾದಿಗಳು ಖಂಡಿಸಬೇಕು ಮತ್ತು ಇವರ ದೇಶ ವಿರೋಧಿ ಚಟುವಟಿಕೆಗಳನ್ನು ಕೊನೆಗಾಣಿಸಬೇಕೆಂದು ಕಾಂ. ಸುರ್ಜಿತ್ ಕರೆಕೊಟ್ಟಿದ್ದಾರೆ.

ಕಷ್ಟಕೋಟಲೆಗಳ ನಡುವೆ ಜನಹಿತಕ್ಕಾಗಿ, ಶ್ರಮಿಸುತ್ತಿರುವ ತ್ರಿಪುರ ಎಡರಂಗ ಸರ್ಕಾರಕ್ಕೆ ಎಲ್ಲ ಬೆಂಬಲವನ್ನು ಮತ್ತು ಸಹಾನುಭೂತಿಯನ್ನು ವ್ಯಕ್ತಪಡಿಸಬೇಕೆಂದೂ ಸಹ ಕಾಂ. ಸುರ್ಜಿತ್ ಪ್ರಜಾತಂತ್ರಪ್ರೇಮಿಗಳಿಗೆ ಕರೆ ನೀಡಿದ್ದಾರೆ. ○

ಆರ್ಥಿಕ ಸಮೀಕ್ಷೆ:

ಕೃಷಿ ಕಾರ್ಮಿಕರ ಕನಿಷ್ಟ ಕೂಲಿಯಲ್ಲಿ ಸ್ಥಗಿತ

ಆರ್. ಚಂದ್ರ

ಹೆಚ್ಚುತ್ತಿರುವ ಕೃಷಿಕಾರ್ಮಿಕರು:

ಕೃಷಿಕಾರ್ಮಿಕರು ನಮ್ಮ ದೇಶದಲ್ಲಿ ಬಡವರಲ್ಲಿ ಕಡುಬಡವರು. ಇತ್ತೀಚೆಗಿನ ವರ್ಷಗಳಲ್ಲಿ ಇವರ ಸಂಖ್ಯೆಯು ಭಾರೀ ಪ್ರಮಾಣದಲ್ಲಿ ಹೆಚ್ಚುತ್ತಿರುವುದನ್ನು ಈ ಕೆಳಗಿನ ಅಂಕಿ ಅಂಶಗಳಿಂದ ಗಮನಿಸಬಹುದು.

I. ವರ್ಷ	ಒಟ್ಟು ಉದ್ಯೋಗಸ್ಥರು	ಕೃಷಿಕಾರ್ಮಿಕರು	ಶೇಕಡಾ
1961	165.5 ಮಿಲಿಯ	27.9 ಮಿಲಿಯ	16.9%
1971	180.4 ಮಿಲಿಯ	47.5 ಮಿಲಿಯ	26.3%
1978	260.92 ಮಿಲಿಯ	58.34 ಮಿಲಿಯ	22.3%

ಸಣ್ಣ ಹಾಗೂ ಕೆಳಮಧ್ಯಮ (marginal) ರೈತರು ದಿವಾಳಿ ಹೋಗುತ್ತಿರುವುದೂ, ಭೂಮಿಯಿಂದ ಒಕ್ಕಲುಗಳನ್ನು ಎಬ್ಬಿಸುತ್ತಿರುವುದೂ ಕೃಷಿಕಾರ್ಮಿಕರ ಸಂಖ್ಯೆಯು ವರ್ಷ ವರ್ಷಕ್ಕೂ ಹೆಚ್ಚುತ್ತಿರುವುದಕ್ಕೆ ಮುಖ್ಯ ಕಾರಣ.

ಕನಿಷ್ಟ ಕೂಲಿಯಲ್ಲಿ ಸ್ಥಗಿತ:

1980ರ ಮೇ ತಿಂಗಳ 'ಇಂಡಿಯನ್ ಲೇಬರ್‌ಜರ್ನಲ್'ನಲ್ಲಿ 1948ರ ಕನಿಷ್ಟ ಕೂಲಿಯ ಕಾನೂನಿನಂತೆ ನಿರ್ಧರಿಸಲಾದ ಕೃಷಿಕಾರ್ಮಿಕರ ಕನಿಷ್ಟ ಕೂಲಿಯು ರಾಜ್ಯವಾರು ಸಮೀಕ್ಷೆಯೆಂದು ಪ್ರಕಟವಾಗಿದೆ. ಈ ಅಧ್ಯಯನದಲ್ಲಿ ಕೃಷಿಕಾರ್ಮಿಕರ ಕನಿಷ್ಟ ಕೂಲಿದರಗಳಲ್ಲಿ, ಕೂಲಿಕೊಡುವ ವಿಧಾನಗಳಲ್ಲಿ, ಕೃಷಿಕೂಲಿಕಾರರ ವರ್ಗೀಕರಣದಲ್ಲಿ ರಾಜ್ಯ-ರಾಜ್ಯಗಳೊಳಗಿರುವ ಅಂತರವನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ. ಈ ಕೆಳಗಿನ ಅಂಕಿಅಂಶಗಳು ಕೃಷಿಕಾರ್ಮಿಕರ ಕನಿಷ್ಟ ಕೂಲಿಯು ಸ್ಥಗಿತಗೊಂಡಿರುವುದನ್ನೂ ಸೂಚಿಸುವುದು.

ಹೆಚ್ಚಿನ ರಾಜ್ಯಗಳು ಕೃಷಿಕಾರ್ಮಿಕರ ಕೂಲಿದರಗಳನ್ನು ನಿರ್ಧರಿಸುವಾಗ ಗಂಡಸರಿಗೆ, ಹೆಂಗಸರಿಗೆ, ಮಕ್ಕಳಿಗೆ ಬೇರೆಬೇರೆ ದರಗಳನ್ನು ನಿಗದಿಮಾಡುತ್ತವೆ. ವ್ಯವಸಾಯದ ವಿವಿಧ ಕೆಲಸಗಳಿಗೆ ಬೇರೆಬೇರೆ ದರಗಳನ್ನು ನಿರ್ಧರಿಸುತ್ತವೆ. ನಿರಾವರಿ ಹಾಗೂ ನೀರಾವರಿಯೇತರ ಭೂಮಿಯಲ್ಲಿ ಕೆಲಸ ಮಾಡುವವರಿಗೆ ಬೇರೆಬೇರೆ ಕೂಲಿದರಗಳನ್ನು ನಿರ್ಧರಿಸುತ್ತವೆ.

ಕೃಷಿಕಾರ್ಮಿಕರ ಕನಿಷ್ಟ ಕೂಲಿಯು ಜೀವನವೆಚ್ಚಕ್ಕನುಗುಣವಾಗಿ ಹೆಚ್ಚುವುದಿಲ್ಲ. ಆದುದರಿಂದ, ಅವರ ಕೂಲಿ ಹಣದ ರೂಪದಲ್ಲಿ ಹೆಚ್ಚಿದರೂ ಕೂಲಿಯ ನಿಜವಾದ ಮೌಲ್ಯವು ಬೆಲೆಏರಿಕೆ ಹಣದುಬ್ಬರದಿಂದಾಗಿ ಕುಸಿಯುತ್ತಿದೆ. ಆದರೆ, ಇಡೀ ದೇಶದಲ್ಲಿ ಪ. ಬಂಗಾಳದಲ್ಲಿ ಮಾತ್ರ ಕೃಷಿಕಾರ್ಮಿಕರ ಕನಿಷ್ಟ ಕೂಲಿಯು ಜೀವನವೆಚ್ಚಕ್ಕನುಗುಣವಾಗಿ ಹೆಚ್ಚುವಂತೆ ಮಾಡಲಾಗಿದೆ. ಕೃಷಿಕಾರ್ಮಿಕರ ಗ್ರಾಹಕ ಬೆಲೆಸೂಚಿಯು (1960-61 = 100) ಹಿಂದಿನ ವರ್ಷದ ಜುಲೈ ತಿಂಗಳಿನಿಂದ ಪ್ರಸಕ್ತ ವರ್ಷದ ಜೂನ್ ತಿಂಗಳವರೆಗೆ 233ಕ್ಕಿಂತ ಹೆಚ್ಚಿದರೆ, ಹೆಚ್ಚಿದ ಪ್ರತಿಯೊಂದು ಬೆಲೆಸೂಚಿ ಸಂಖ್ಯೆಗೂ ತಿಂಗಳಿಗೆ ದೊಡ್ಡವರಿಗೆ 62 ಪೈಸೆಯಂತೆಯೂ ಮಕ್ಕಳಿಗೆ 45 ಪೈಸೆಯಂತೆಯೂ ಮುಂದಿನ ಅಕ್ಟೋಬರ್ ತಿಂಗಳಿನಿಂದ ಅವರ ಕನಿಷ್ಟ ಕೂಲಿಯನ್ನು ಹೆಚ್ಚಿಸಲಾಗುವುದು. ಅಂದರೆ, ಸಧ್ಯ ಈ ಬೆಲೆಸೂಚಿಯು 368ಕ್ಕೆ ನೆಗೆದಿದ್ದುದರಿಂದ ಈ ರಾಜ್ಯದ ಕೃಷಿಕಾರ್ಮಿಕರ ಕನಿಷ್ಟ ದಿನಕೂಲಿಯಲ್ಲಿ ರೂ. 2.80 ಹೆಚ್ಚಾಗುವುದು.

1976ರ ನಂತರ ಕೇವಲ 5 ರಾಜ್ಯಗಳಲ್ಲಿ ಕೃಷಿಕಾರ್ಮಿಕರ ಕನಿಷ್ಟ ಕೂಲಿಯನ್ನು ಪರಿಷ್ಕರಿಸಿ ಹೆಚ್ಚಿಸಲಾಗಿತ್ತು. 13 ರಾಜ್ಯಗಳಲ್ಲಿ / ಕೇಂದ್ರಾಡಳಿತ ಪ್ರದೇಶಗಳಲ್ಲಿ ಅವರ ಕೂಲಿದರಗಳು 1975 ಅಥವಾ ಅದಕ್ಕಿಂತಲೂ ಹಿಂದೆ ನಿರ್ಧರಿಸಿದವುಗಳಾಗಿದ್ದವು. ಅಧ್ಯಯನವು ಅಕ್ಟೋಬರ್ 1979ರ ವರೆಗಿನ ಎಲ್ಲಾ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಂಡಿದ್ದು, ಇತ್ತೀಚೆಗೆ ಇನ್ನೂ 5 ರಾಜ್ಯಗಳು ಕೃಷಿಕಾರ್ಮಿಕರ ಕನಿಷ್ಟ ಕೂಲಿದರಗಳನ್ನು ಪರಿಷ್ಕರಿಸಿವೆ ಎಂದು ತಿಳಿದು ಬಂದಿದೆ. ಆದರೆ ಪರಿಷ್ಕೃತ ಕೂಲಿದರಗಳು ಪರಿಣತರಲ್ಲದ (un-skilled) ಕೃಷಿಕೂಲಿಕಾರರಿಗೆ ಮಾತ್ರ ಅನ್ವಯಿಸುವುದು.

ಕೃಷಿಕಾರ್ಮಿಕರಿಗೆ ಜೀವನಾವಶ್ಯಕ ಕೂಲಿ ಇಲ್ಲ:

ಕೃಷಿಕಾರ್ಮಿಕರ ಕೂಲಿದರಗಳನ್ನು ನಿರ್ಧರಿಸುವಾಗ ಈ ಬಡ ಕಾರ್ಮಿಕರಿಗೆ ನ್ಯಾಯವಾದ ಜೀವನಾವಶ್ಯಕ ಕೂಲಿಯನ್ನು ಕೊಡಬೇಕೆಂಬ ಧ್ಯೇಯವನ್ನು ಹೆಚ್ಚಿನ ರಾಜ್ಯಗಳು ಅನುಸರಿಸುವುದೇ ಇಲ್ಲ. ಗುಜರಾತ್ ಮತ್ತು ಆಂಧ್ರ ಪ್ರದೇಶ ಸರಕಾರಗಳು ನೇಮಿಸಿದ ಕನಿಷ್ಟ ಕೂಲಿಯು ಸಮಿತಿಗಳ ವರದಿಗಳಿಂದ ಈ ವಿಷಯ ಸ್ಪಷ್ಟವಾಗುವುದು. 'ರಾಷ್ಟ್ರೀಯ ಆದಾಯವು ಬಹಳ ಕಡಿಮೆಯಾಗಿರುವುದರಿಂದ ಕೂಲಿ ನಿರ್ಧರಿಸುವಾಗ ನೈತಿಕ ಮೌಲ್ಯಗಳನ್ನು ಗಣನೆಗೆ ತೆಗೆದುಕೊಳ್ಳುವುದರಿಂದ ರಾಜ್ಯದ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಆಗುವುದಲ್ಲದೆ, ಕೃಷಿ ಉತ್ಪಾದನೆಯೂ ಹಿಂಜರಿಯುವುದು' ಎಂದು ಆಂಧ್ರಪ್ರದೇಶ ಸರಕಾರದ ಸಮಿತಿಯು ವರದಿಮಾಡಿದೆ! ಕೃಷಿ ವಲಯವು ಕನಿಷ್ಟ ವೇತನ ಕೊಡಲು ಸಶಕ್ತವಾಗಿದೆ ಎಂಬುದೂ ಕೃಷಿಕಾರ್ಮಿಕರ ಅವಶ್ಯಕತೆಗಳನ್ನು ಗಮನಿಸಬೇಕೆಂಬುದೂ ಕೇವಲ ಕಾಲ್ಪನಿಕ ಭಾವನೆಗಳು ಎಂದು ಗುಜರಾತ್ ಸರಕಾರದ ಸಮಿತಿಯು ಅಭಿಪ್ರಾಯಪಟ್ಟಿದೆ! "ವಾಸ್ತವಿಕತೆಯನ್ನು ಗಮನಿಸಿ, ಕೃಷಿ ವಲಯಕ್ಕೆ ಭಾರವಾಗದಂತೆ ಕೂಲಿ ನಿರ್ಧರಿಸಬೇಕು" ಎಂದು ಈ ಸಮಿತಿಯು ಸಲಹೆಮಾಡಿದೆ. ಜನತಾ ಕೇಂದ್ರಸರಕಾರ ನೇಮಿಸಿದ ಭೂತಲಿಂಗಂ ಸಮಿತಿಯೂ 1978ರಲ್ಲಿ ಇದೇ ಆಧಾರವನ್ನು ಮುಂದೊಡ್ಡಿ, ರಾಷ್ಟ್ರೀಯ ಆದಾಯವು ಕಡಿಮೆಯಾಗಿರುವುದರಿಂದ ಕನಿಷ್ಟ ಕೂಲಿಯನ್ನು ತಿಂಗಳಿಗೆ ರೂ. 100ರಷ್ಟೇ ನಿಗದಿ ಮಾಡಲು (ದಿನಕ್ಕೆ ರೂ. 3.33!) ಸಲಹೆ ಮಾಡಿತ್ತು.

ಮಹಾರಾಷ್ಟ್ರ ಸರಕಾರದ ಸಮಿತಿಯು ಕೃಷಿಕಾರ್ಮಿಕರ ಕನಿಷ್ಟ ಕೂಲಿಯನ್ನು ನಿರ್ಧರಿಸುವಾಗ ಅವರ ಜೀವನಾವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡಿದೆ ಎಂದು ಹೇಳಿದರೂ, ಅದು ದಿನಕ್ಕೆ 4ರಿಂದ ರೂ. 5.50 ರಷ್ಟೇ ಕೂಲಿ ನಿಗದಿ ಮಾಡಿತ್ತು.

ಬಡತನರೇಖೆಗಿಂತಲೂ ಕಡಿಮೆ ಕನಿಷ್ಟ ಕೂಲಿ:

ಹೆಚ್ಚಿನ ರಾಜ್ಯಗಳು ಕೃಷಿಕಾರ್ಮಿಕರಿಗೆ ಕನಿಷ್ಟ ಮಟ್ಟದ ಜೀವನಕ್ಕಾದರೂ ಅಗತ್ಯವಿರುವಷ್ಟು ಶಾಸನಾನ್ವಯ ಕನಿಷ್ಟ ಕೂಲಿಯನ್ನು ನಿಗದಿಗೊಳಿಸಲು ತಯಾರಿಲ್ಲ. 1960-61ರ ಬೆಲೆಗಳ ಮಟ್ಟದಲ್ಲಿ ವರ್ಷಕ್ಕೆ ರೂ. 240 ಪ್ರತಿಯೊಬ್ಬನ ಸರಾಸರಿ ಖರ್ಚು ಬಡತನ ರೇಖೆಯ ಮಟ್ಟದ ಖರ್ಚು ಎಂಬ ಆಧಾರದಲ್ಲಿ, ಪ್ರಸಕ್ತ ಅಧ್ಯಯನವು ವಿವಿಧ ರಾಜ್ಯಗಳಲ್ಲಿನ ಕೃಷಿಕಾರ್ಮಿಕರ ಕುಟುಂಬಗಳ ವಾರ್ಷಿಕ ಆದಾಯವು ಬಡತನ ರೇಖೆಗಿಂತಲೂ ಎಷ್ಟು ಕಡಿಮೆ ಎಂದು ತಿಳಿಸಿದೆ. ಈ ಅಧ್ಯಯನಕ್ಕಾಗಿ 1964-65ರ ಗ್ರಾಮೀಣ ಕಾರ್ಮಿಕರ ವಿಚಾರಣಾ ಆಯೋಗದ ವರದಿಯ ಆಧಾರದಲ್ಲಿ 1. ಕುಟುಂಬದಲ್ಲಿರುವ ಸರಾಸರಿ ಸದಸ್ಯರ ಸಂಖ್ಯೆ 2. ಗಂಡಸರು, ಹೆಂಗಸರು, ಮಕ್ಕಳು ಸೇರಿ ಒಂದು ಕುಟುಂಬದಲ್ಲಿರುವ ಒಟ್ಟು ದುಡಿಯುವವರ ಸರಾಸರಿ ಸಂಖ್ಯೆ, 3. ಪ್ರತಿಯೊಬ್ಬನಿಗೂ ವರ್ಷಕ್ಕೆ ಸಿಗುವ ಸರಾಸರಿ ಕೆಲಸದ ದಿನಗಳು, ಇವುಗಳನ್ನೆಲ್ಲಾ ಪರಿಶೀಲಿಸಲಾಗಿದೆ. ಈ ಕೆಳಗಿನ ಅಂಕಿಸಂಖ್ಯೆಗಳು ಕೃಷಿಕಾರ್ಮಿಕರ ಕುಟುಂಬಗಳ ವಾರ್ಷಿಕ ಆದಾಯವು ಪಂಜಾಬ್ ರಾಜ್ಯ ಒಂದನ್ನು ಬಿಟ್ಟು ಉಳಿದ ಎಲ್ಲಾ ರಾಜ್ಯಗಳಲ್ಲಿ ಬಡತನ ರೇಖೆಗಿಂತಲೂ ಎಷ್ಟು ಕಡಿಮೆ ಇದೆ ಎಂದು ತಿಳಿಸುವುವು.

ಕೇರಳ ರಾಜ್ಯದಲ್ಲಿ ಕೃಷಿಕಾರ್ಮಿಕರ ಕನಿಷ್ಟ ಕೂಲಿ ದೇಶದಲ್ಲಿಯೇ ಹೆಚ್ಚಾಗಿದ್ದರೂ, ವರ್ಷದಲ್ಲಿ ಸಿಗುವ ಸರಾಸರಿ ಕೆಲಸದ ದಿನಗಳು ದೇಶದಲ್ಲಿಯೇ ಕನಿಷ್ಟ (187 ದಿನಗಳು) ವಾಗಿರುವುದರಿಂದ, ಈ ರಾಜ್ಯದಲ್ಲಿ ಅವರ ಕುಟುಂಬದ ಸರಾಸರಿ ವಾರ್ಷಿಕ ಆದಾಯವು ಬಡತನರೇಖೆಯ ಆದಾಯಕ್ಕಿಂತ ಗಣನೀಯವಾಗಿ ಕಡಿಮೆಯಾಗಿದೆ. ಪ. ಬಂಗಾಳದಲ್ಲಿಯೂ ಇತರ ರಾಜ್ಯಗಳಿಗಿಂತ ಸರ್ವಸಾಮಾನ್ಯವಾಗಿ ಹೆಚ್ಚು ಕನಿಷ್ಟ ಕೂಲಿ ಇದ್ದರೂ, ವರ್ಷದಲ್ಲಿ ಸರಾಸರಿ 297 ದಿನಗಳ ಕೆಲಸ ಸಿಗುವುದಾದರೂ, ಅಲ್ಲಿಯೂ

(7ನೇ ಪುಟ ನೋಡಿ)

II. ರಾಜ್ಯಗಳು	ಕೃಷಿಕಾರ್ಮಿಕರ ಕನಿಷ್ಟ ದಿನಕೂಲಿ	ವರ್ಷದಲ್ಲಿ ಸರಾಸರಿ ಸಿಗುವ ಕೆಲಸದ ದಿನಗಳು (ಗಂಡಸರಿಗೆ)
ಕೇರಳ	ರೂ. 8-00	187
ಪಂಜಾಬ್	ರೂ. 6.70-ರೂ. 7.70 (ಊಟ ಕೊಟ್ಟು) ರೂ. 8.70-ರೂ. 9.70 (ಊಟ ಇಲ್ಲ)	305
ಕರ್ನಾಟಕ	ರೂ. 3.25-ರೂ. 5.50 (ಊಟಕೊಟ್ಟು) ರೂ. 7 (ಊಟ ಇಲ್ಲದೆ)	247
ತಮಿಳುನಾಡು	ರೂ. 3.50-ರೂ. 5-00	—
ಆಂಧ್ರಪ್ರದೇಶ	ರೂ. 3.75-ರೂ. 5-00	—
ಪ. ಬಂಗಾಳ (1974)	ರೂ. 7.25	297
ಜಮ್ಮು-ಕಾಶ್ಮೀರ	ಕನಿಷ್ಟ ವೇತನ ನಿರ್ಧರಿಸಲೇ ಇಲ್ಲ	—
ಇತರ-ರಾಜ್ಯಗಳು	ಸುಮಾರು ರೂ. 5-00	222: ಬಿಹಾರ್ 245: ಮ. ಪ್ರದೇಶ 249: ಮಹಾರಾಷ್ಟ್ರ

III. ರಾಜ್ಯಗಳು	ಕೃಷಿಕಾರ್ಮಿಕರ ಕುಟುಂಬ ಒಂದರ ಸರಾಸರಿ ವಾರ್ಷಿಕ ಆದಾಯ	ಬಡತನರೇಖೆಯ ಮಟ್ಟದಲ್ಲಿರ ಬೇಕಾದ ಆದಾಯ	ಬಡತನ ಮಟ್ಟಕಿಂತಲೂ ಕಡಿಮೆ ಆಗಿರುವ ಆದಾಯದ ಮೊತ್ತ	ಶೇಕಡಾ ಕಡಿಮೆ
ಪಂಜಾಬ್	ರೂ. 4813	ರೂ. 4673	+ ರೂ. 140	—
ಗುಜರಾತ್	ರೂ. 3427	ರೂ. 3563	— ರೂ. 136	—
ತ್ರಿಪುರಾ	ರೂ. 1314	ರೂ. 3942	— ರೂ. 2628	66.9%
ಬಿಹಾರ್	ರೂ. 1480	ರೂ. 4055	— ರೂ. 2575	63.5%
ಒರಿಸ್ಸಾ	ರೂ. 1690	ರೂ. 4225	— ರೂ. 2535	60.8%
ಉ. ಪ್ರದೇಶ	ರೂ. 1930	ರೂ. 3673	— ರೂ. 1743	47.4%
ಕೇರಳ	ರೂ. 2300	ರೂ. 4021	— ರೂ. 1721	38.8%
ಮಹಾರಾಷ್ಟ್ರ	ರೂ. 2340	ರೂ. 3972	— ರೂ. 1632	41.6%
ಅಸ್ಸಾಂ	ರೂ. 2506	ರೂ. 4042	— ರೂ. 1536	38.2%
ಪ. ಬಂಗಾಳ	ರೂ. 3276	ರೂ. 4366	— ರೂ. 1090	24.9%

ವಿ. ಸೂ.: ಇತರ ರಾಜ್ಯಗಳಲ್ಲಿ ಅಂತರ ತ್ರಿಪುರಾ, ಬಿಹಾರ್, ಒರಿಸ್ಸಾ, ಉ. ಪ್ರದೇಶ, ಕೇರಳ, ಮಹಾರಾಷ್ಟ್ರ, ಅಸ್ಸಾಂ ಮತ್ತು ಪ. ಬಂಗಾಳ ರಾಜ್ಯಗಳಿಗಿಂತ ಕಡಿಮೆ.

ಕಮ್ಯುನಿಸ್ಟ್ ಪಕ್ಷ ಗಲಿಬಿಲಿಗೊಂಡಿರುವುದೇಕೆ?

ಭಾರತ ಕಮ್ಯುನಿಸ್ಟ್ ಪಕ್ಷದ ಮುಖಪತ್ರಿಕೆ ನ್ಯೂಏಜ್‌ನ ಜುಲೈ 6ರ ಸಂಚಿಕೆಯಲ್ಲಿ ಬಂದಿರುವ ಭೂಪೇಶ್‌ಗುಪ್ತ ಅವರ ಲೇಖನವನ್ನು ನೋಡಿದರೆ, ಭಾರತ-ಚೀನ ಸಂಬಂಧಗಳು ಸಕ್ರಮಗೊಳ್ಳುವ ವಿಚಾರದಲ್ಲಿ ಈಗ ಆಗುತ್ತಿರುವ ಬೆಳವಣಿಗೆಗಳು ಭಾರತ ಕಮ್ಯುನಿಸ್ಟ್ ಪಕ್ಷವನ್ನು ತುಂಬ ಗಲಿಬಿಲಿಗೊಳಿಸಿವೆ ಎಂದು ಅನ್ನಿಸುತ್ತದೆ.

1959ರಿಂದ ಮತ್ತು ಅದರಲ್ಲೂ 1962ರ ಭಾರತ-ಚೀನ ಗಡಿ ಘರ್ಷಣೆಯ ನಂತರ, ಈದಿನ ಕಮ್ಯುನಿಸ್ಟ್ ಪಕ್ಷದ ನಾಯಕರೂ ದನಿಸೇರಿಸಿದ್ದ, ಆರೆಸ್ಸೆಸ್-ಜನಸಂಘ ಮುಂದಾಳಾಗಿದ್ದ ಗುಂಪಿನವರು, ಮತ್ತು ಕಾಂಗ್ರೆಸ್ ಆಡಳಿತಗಾರರು ಎಂಥ ಚೀನವಿರೋಧಿ ಜ್ವರವನ್ನು ಹರಡಿದ್ದರೆಂದರೆ, ಭಾರತ ಮತ್ತು ಚೀನದ ವಿವಾದಗಳನ್ನು ಶಾಂತಿಯುತವಾಗಿ ನಿರ್ಧರಿಸುವ ಮಾತನ್ನಾಡುವುದೂ ಕೂಡ ಒಂದು ಅಪರಾಧವಾಗಿತ್ತು. ಆದರೆ ಈ ಚೀನವಿರೋಧಿ ದೃಷ್ಟಿ ಕ್ರಮೇಣ ಕಡಿಮೆಯಾಗಿ ಚೀನದ ಜೊತೆ ಸಂಬಂಧಗಳನ್ನು ಸರಿಪಡಿಸಿಕೊಳ್ಳುವ ಅಗತ್ಯದ ಬಗ್ಗೆ ವಾಸ್ತವ ತಿಳುವಳಿಕೆ ಮೂಡುತ್ತಿದೆ.

ಬದಲಾದ ಪರಿಸ್ಥಿತಿ :

ಜನತೆಯ ನಡುವೆ ಚೀನ ವಿರೋಧಿ ಭಾವನೆಗಳನ್ನು ಆ ದಿನಗಳಲ್ಲಿ ಬಿತ್ತಿದ ಆಡಳಿತ ವರ್ಗದ ಕೆಲವರು, ಏಕಸ್ವಾಮ್ಯ ನಿಯಂತ್ರಣದ ಪತ್ರಿಕೆಗಳು, ಇವರೆಲ್ಲರೂ ಹಿಂದಿನದನ್ನು ಮರೆತು ಈಗ ಚೀನದ ಜೊತೆ ಹೊಸ ಸಂಬಂಧಗಳನ್ನು ಆರಂಭಿಸುವುದರಲ್ಲಿ ಉತ್ಸುಕರಾಗಿದ್ದಾರೆ. ಚೀನದ ಜೊತೆ ಸಂಬಂಧಗಳನ್ನು ಸರಿಪಡಿಸುವ ವಿಚಾರದಲ್ಲಿ ದೇಶದ ಜನತೆ ಪೂರ್ಣ ಬೆಂಬಲ ಕೊಡುತ್ತಾರೆ.

ಚೀನದ ಜೊತೆ ಶಾಂತಿಯುತವಾದ ಒಪ್ಪಂದವನ್ನು ಮಾಡಿಕೊಳ್ಳಬೇಕು, ನಮ್ಮ ನೆರೆ ರಾಷ್ಟ್ರದೊಂದಿಗೆ ಸಂಬಂಧಗಳನ್ನು ಸರಿಪಡಿಸಿಕೊಳ್ಳಬೇಕು ಎಂದು ಆ ದಿನಗಳಲ್ಲಿ ಹೇಳಿ ಅನೇಕ ದಬ್ಬಾಳಿಕೆ ಕ್ರಮಗಳನ್ನು ಎದುರಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಇತ್ತೀಚಿನ ಬೆಳವಣಿಗೆಗಳಿಂದಾಗುವುದು ಸಂತಸ ಉಂಟಾಗುವುದು ಸಹಜ.

ಭಾರತ-ಚೀನ ಸಂಬಂಧಗಳ ಸುಧಾರಣೆಯನ್ನು ಇಡೀ ದೇಶವೇ ಏಕಕಂಠದಿಂದ ಸ್ವಾಗತಿಸುತ್ತಿರುವಾಗ, ಏಷ್ಯದ ಎರಡು ಜನಪ್ರಿಯ ರಾಷ್ಟ್ರಗಳ ನಡುವೆ, ಅದರಲ್ಲೂ ನೆರೆರಾಷ್ಟ್ರಗಳಾಗಿ, ಎರಡರ ನಡುವೆ ಸಂಬಂಧಗಳನ್ನು ಸುಧಾರಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳುತ್ತಿರುವ ಸಮಯದಲ್ಲಿ ಭೂಪೇಶ್‌ಗುಪ್ತ ಅವರ ಪಕ್ಷದ ಪರವಾಗಿ ಇದರ ಬಗ್ಗೆ ಅಪಾದನೆಗಳನ್ನು ಮಾಡುತ್ತಿದ್ದಾರೆ.

ಭಾರತ-ಚೀನ ಸಂಬಂಧಗಳು ಸರಿಹೋಗುವುದನ್ನು 1650 ಮಿಲಿಯನ್ ಜನತೆಯ ನಡುವೆ ಸ್ನೇಹ ವೃದ್ಧಿಸುವುದನ್ನು ನೋಡಲು ಇಷ್ಟಪಡದಿರುವವರು ಯಾರೂ ಇಲ್ಲ ಎಂದು ಭೂಪೇಶ್ ಗುಪ್ತ ಲೇಖನವನ್ನು ಪ್ರಾರಂಭಿಸುತ್ತಾರೆ. ಆದರೆ ಆಮೇಲೆ? ಚೀನವನ್ನು ಎಷ್ಟು ಕೆಟ್ಟದಾಗಿ ಚಿತ್ರಿಸುತ್ತಾರೆಂದರೆ, ಅದನ್ನು ಅಮೆರಿಕದ ಸಾಮ್ರಾಜ್ಯಶಾಹಿಗೆ ಸಮಾನವೆಂದು ಹೇಳಿ ಅದನ್ನು ಎಲ್ಲರೂ ಅಸಹ್ಯಿಸುತ್ತಾರೆಂದು ವರ್ಣಿಸುತ್ತಾರೆ. ಪೀಕಿಂಗ್ "ಅಮೆರಿಕದ ಸಾಮ್ರಾಜ್ಯಶಾಹಿ ಮತ್ತು ಅಂತರ್‌ರಾಷ್ಟ್ರೀಯ ಪ್ರತಿಗಾಮಿ"ಗಳ ಜೊತೆ ಸೇರಿದೆ ಮತ್ತು ಚೀನದ ಜೊತೆ ಸಂಬಂಧಗಳನ್ನು ಸರಿಪಡಿಸಿಕೊಂಡರೆ ಅದು, "ದೇಶವು ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗಳನ್ನು ಮುನ್ನಡೆಸಲು ಪ್ರಯುಕ್ತಿಸುತ್ತದೆ" ಎಂದು ಹೇಳುವ ಭಾರತೀಯ ಸಂವಿಧಾನದ 51ನೇ ವಿಧಿಯ ಉಲ್ಲಂಘನೆಯಾಗುತ್ತದೆ ಎನ್ನುತ್ತಾರೆ. ಚೀನದ ಸಂಬಂಧಗಳನ್ನು ಸರಿಪಡಿಸಿಕೊಳ್ಳುವುದರ ಬಗ್ಗೆ ಕಾಂಗ್ರೆಸ್ ಆಡಳಿತಗಾರರಿಗೆ ಸಂವಿಧಾನದ ಹೆಸರಿನಲ್ಲಿ ಎಚ್ಚರಿಕೆ ಕೊಡುತ್ತಾರೆ ಭೂಪೇಶ್ ಗುಪ್ತ.

ಹಳೆಕಾಲದ ರೋಗ :

ಭಾರತ-ಚೀನ ಗಡಿವಿವಾದವನ್ನು ಬಗೆಹರಿಸಿಕೊಳ್ಳುವುದರ ಬಗ್ಗೆ ಡೆಂಗ್ ಕ್ಸಿಯೋಪಿಂಗ್ ಅವರ ಸಲಹೆಗಳನ್ನು ಅವರು ಹೀಗಳೆದು ತಳ್ಳಿಹಾಕುತ್ತಾ, "ಇದು, ಭಾರತದ ಮೇಲೆ ಪೀಕಿಂಗ್‌ನ ಆಕ್ರಮಣವನ್ನು ಭಾರತ ಒಪ್ಪಿಕೊಳ್ಳುವಂತೆ ಮಾಡುವ, ನ್ಯಾಯಬದ್ಧವನ್ನಾಗಿ ಮಾಡುವ ಸಲಹೆ" ಎನ್ನುತ್ತಾರೆ.

ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಬೇಕಾದಷ್ಟು ಎಚ್ಚರಿಕೆಗಳನ್ನು ಕೊಡುತ್ತಾರೆ. ಕಮ್ಯುನಿಸ್ಟ್ ಚಳುವಳಿಯನ್ನು ಒಡೆದದ್ದು ಚೀನ. ಈಗ ಚೀನ "ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು, ಅದರಲ್ಲೂ ಸಿ.ಪಿ.ಐ. ಮತ್ತು ಸಿ.ಪಿ.ಐ. (ಎಂ)ಗಳ ನಡುವಿನ ಐಕ್ಯತೆಯನ್ನು ಒಡೆಯಲು ಕ್ರಿಯಾಶೀಲವಾಗಿದೆ" ಎಂದಿದ್ದಾರೆ.

ಸೋವಿಯತ್ ಒಕ್ಕೂಟ ತನ್ನ ಮೊದಲನೇ ಶತ್ರು ಎಂದು ಚೀನ ಪರಿಗಣಿಸಿದೆ ಎಂದು ಭೂಪೇಶ್‌ಗುಪ್ತ ಹೇಳುತ್ತಾರೆ. ಆದರೆ ಅವರ ದೃಷ್ಟಿಕೋನ ಎಂಥದು? ನಮ್ಮ ದೇಶದ ಸ್ವಾತಂತ್ರ್ಯ, ಮತ್ತು ಏಕತೆಯ ವಿರುದ್ಧ ಸದಾ ಪಿತೂರಿ ನಡೆಸುತ್ತಿರುವ ಅಮೆರಿಕದ ಸಾಮ್ರಾಜ್ಯಶಾಹಿಯೊಡನೆ ಭಾರತ ಸರ್ಕಾರ ಒಳ್ಳೆಯ ಸಂಬಂಧಗಳನ್ನು ಇರಿಸಿಕೊಂಡಿರುವುದರ ಬಗ್ಗೆ ಅವರಿಗೇನೂ ಅನ್ನಿಸುವುದಿಲ್ಲ. ಆದರೆ ಭಾರತ ಮತ್ತು ಚೀನದ ಸಂಬಂಧಗಳು ಸರಿಹೋಗುವುದನ್ನು ಮಾತ್ರ ಅವರು ಸಹಿಸುವುದಿಲ್ಲ. ಭೂಪೇಶ್‌ಗುಪ್ತ ಮತ್ತು ಅವರ ಪಕ್ಷದವರಿಗೆ ಪರಿಹಾರವೇ ಸಿಕ್ಕಿಲ್ಲದಿರುವ ಹಳೆಗಾಲದ ರೋಗ ಇದು.

ಒಡಕಿಗೆ ಕಾರಣವೇನು :

ಪಕ್ಷದ ಕಾರ್ಯಕ್ರಮ ಮತ್ತು ಅದರ ತಂತ್ರ ವಿಧಾನದ ಬಗ್ಗೆ, ಅದರಲ್ಲೂ ಮೊದಲಿಗೆ ದೇಶದ ಬಂಡವಾಳಶಾಹಿ-ಭೂಮಾಲೀಕ ಸರ್ಕಾರದ ಬಗೆಗಿನ ಧೋರಣೆಯ ವಿಷಯದಲ್ಲಿ ಆಗಿನ ಕಮ್ಯುನಿಸ್ಟ್ ಪಕ್ಷದೊಳಗೆ ಇದ್ದ ಭಿನ್ನಾಭಿಪ್ರಾಯಗಳೇ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಒಡೆಯಲು ಕಾರಣ ಎಂಬುದನ್ನು ಸಿ.ಪಿ.ಐ ನ ಎಲ್ಲ ನಾಯಕರಿಗಿಂತ ಹೆಚ್ಚಾಗಿ ಭೂಪೇಶ್‌ಗುಪ್ತರಿಗೆ ಗೊತ್ತಿರಬೇಕು. ಈ ಭಿನ್ನಾಭಿಪ್ರಾಯಗಳು ಪಕ್ಷದ ನಾಲ್ಕನೇ ಅಧಿವೇಶನಕ್ಕೆ ಮೊದಲೇ, ಅಂದರೆ 1955ರಷ್ಟು ಹಿಂದೆಯೇ ತಲೆ ಎತ್ತಿದ್ದವು ನಂತರ ಅವು ತೀವ್ರವಾಗಿ ಬೆಳೆದವು. ಎಂಬುದು ಭೂಪೇಶ್‌ಗುಪ್ತರಿಗೆ ಗೊತ್ತು. ಪಕ್ಷದ ಆರನೇ ಅಧಿವೇಶನದಲ್ಲಿ, ಪಕ್ಷದ ಮುಂದೆ ಮೂರು ಕಾರ್ಯಕ್ರಮ ಕರಡುಗಳು ಇದ್ದವು. ಈದಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕರ ಜೊತೆ ಅವರೂ ಕೂಡ ಅಧಿವೇಶನದ ಮುಂದಿಟ್ಟ ಮೂರು ಕಾರ್ಯಕ್ರಮಗಳಲ್ಲಿ ಒಂದಕ್ಕೆ ಸಹಿ ಹಾಕಿದರು. 1956ರಲ್ಲಿ ಚೀನ ಮತ್ತು ಸೋವಿಯೆತ್ ಒಕ್ಕೂಟಗಳ ಕಮ್ಯುನಿಸ್ಟ್ ಪಕ್ಷಗಳು ಅತ್ಯುತ್ತಮ ಸಂಬಂಧ ಹೊಂದಿದ್ದವು ಎಂಬುದೂ ಗುಪ್ತರಿಗೆ ಗೊತ್ತು. ಆದ್ದರಿಂದ ಆ ಹಂತದಲ್ಲಿ ಪಕ್ಷದೊಳಗಿದ್ದ ಭಿನ್ನಾಭಿಪ್ರಾಯಗಳು ಚೀನದ ಕಮ್ಯುನಿಸ್ಟ್ ಪಕ್ಷದ ಸೋವಿಯೆತ್ ವಿರೋಧಿ ನೀತಿಯಿಂದ ಉಂಟಾದುದಲ್ಲ. ಹಾಗಾದರೆ, ಭೂಪೇಶ್‌ಗುಪ್ತರು ಚರಿತ್ರೆಯನ್ನು ಸುಳ್ಳಿಗೆ ತಿರುಗಿಸಿ, ಕಮ್ಯುನಿಸ್ಟ್ ಪಕ್ಷದ ಒಡಕಿನ ಹೊಣೆಯನ್ನು ಚೀನದ ಕಮ್ಯುನಿಸ್ಟ್ ಪಕ್ಷಕ್ಕೆ ಕಟ್ಟುತ್ತಿರುವುದೇಕೆ?

ಆ ದಿನಗಳಲ್ಲಿ ಚೀನಕ್ಕೆ ಹೋಗಿದ್ದ ಎರಡು ನಿಯೋಗಗಳು ಮತ್ತು ಚೀನದ

ಹರಿಕಿಷನ್ ಸಿಂಗ್ ಸುರ್ಜೀತ್

ಕಮ್ಯುನಿಸ್ಟ್ ಪಕ್ಷದ ನಾಯಕರ ಜೊತೆ ಅವರು ಭಾಗವಹಿಸಿದ್ದ ಮಾತುಕತೆಗಳ ಬಗ್ಗೆಯೂ ಭೂಪೇಶ್‌ಗುಪ್ತ ಹೇಳುತ್ತಾರೆ. ಚೀನದ ನಾಯಕರ ಜೊತೆ ಒಮ್ಮೆ ಮಾತುಕತೆ ನಡೆಸುತ್ತಿರುವಾಗ, ಅವರು "ನೆಹರು ಮತ್ತು ಕಾಂಗ್ರೆಸ್‌ನ ಬೆಂಬಲಿಗರಾಗಿ ನಿಲ್ಲಿ, ವಿರೋಧ ಪಕ್ಷವಾಗಿ ಇರಬೇಡಿ ಎಂದು ಉಪದೇಶಿಸಿದರು" ಎಂದಿದ್ದಾರೆ. ಆದರೆ ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಕೂಡಾ ನಮ್ಮ ದೇಶದ ಕಮ್ಯುನಿಸ್ಟ್ ಪಕ್ಷಕ್ಕೆ ಅದೇ ಉಪದೇಶವನ್ನು ಕೊಟ್ಟಿತ್ತು ಎಂಬುದನ್ನು ಹೇಳಲು ಭೂಪೇಶ್‌ಗುಪ್ತ ಯಾಕೆ ಹಿಂಜರಿಯುತ್ತಿದ್ದಾರೆ? ಚೀನದ ಮತ್ತು ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷಗಳೆರಡಕ್ಕೂ ಒಂದೇ ತಿಳುವಳಿಕೆ ಇದೆ ಎಂಬುದು ಗೊತ್ತಾಗಿ, ನಮ್ಮ ಕಮ್ಯುನಿಸ್ಟ್ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳನ್ನು ಚೀನ ಪ್ರೇರೇಪಿಸಿತು ಎಂಬ ಅವರ ಮಿಥ್ಯೆ ಒಡೆಯುತ್ತದೆ ಎಂತಲೆ?

ಕಾಂಗ್ರೆಸ್ ಬಂಡವಾಳಶಾಹಿ-ಭೂಮಾಲೀಕ ಪಕ್ಷದ ಬಗ್ಗೆ ತಳೆಯಬೇಕಾದ ಧೋರಣೆಯ ವಿಚಾರದಲ್ಲಿ ಆಗಿನ ಐಕ್ಯ ಕಮ್ಯುನಿಸ್ಟ್ ಪಕ್ಷದೊಳಗೆ ಭಿನ್ನಾಭಿಪ್ರಾಯಗಳು ತೀವ್ರವಾಗಿದ್ದ ಸಮಯದಲ್ಲಿ, ಪಕ್ಷವು ನೆಹರು ಮತ್ತು ಕಾಂಗ್ರೆಸ್ಸನ್ನು ಹಿಂಬಾಲಿಸಬೇಕೆಂಬುದು ಚೀನ ಮತ್ತು ಸೋವಿಯತ್ ಒಕ್ಕೂಟಗಳೆರಡರ ಅಭಿಪ್ರಾಯವೂ ಆಗಿತ್ತು. ಡಾಂಗೆವಾದಿ ನಾಯಕತ್ವವು ಒಡಕನ್ನು ಶೀಘ್ರಗೊಳಿಸಿತೆನ್ನುವುದು ನಿಜವಷ್ಟೇ ಅಲ್ಲ, ಚೀನಿಯರು ಅಸ್ಸಾಮಿನ ತೈಲ ಕೇಂದ್ರಗಳು ಮತ್ತು ಟೀ ತೋಟಗಳ ಮೇಲೆ ಕಣ್ಣಿಟ್ಟಿದ್ದಾರೆಂದು ಹೇಳುವಮಟ್ಟಕ್ಕೂ ಅವರು ಇಳಿದರು. ಪಕ್ಷದ ವಿವಿಧ ಹಂತಗಳ ನಾಯಕರನ್ನು ಬಂಧಿಸಿ, ಸೆರೆಯಲ್ಲಿಟ್ಟಾಗ, ವಿಶ್ವದ ಕಮ್ಯುನಿಸ್ಟ್ ಚಳುವಳಿಯ ಇತಿಹಾಸದಲ್ಲೆ ಮೊದಲ ಬಾರಿಗೆ ಇವರು ಆ ಕ್ರಮವನ್ನು ಪ್ರತಿಭಟಿಸಲು ನಿರಾಕರಿಸಿದರು. ಈ ಬಂಧನಗಳನ್ನು ಪ್ರಾವ್ದಾ ಪ್ರತಿಭಟಿಸಿತು ಆದರೆ ಕಮ್ಯುನಿಸ್ಟ್ ಪಕ್ಷದ ನಾಯಕರು ಪ್ರತಿಭಟಿಸಲಿಲ್ಲ ಎಂಬುದನ್ನು ಭೂಪೇಶ್ ಗುಪ್ತ ಮರೆತಿರಲಿಕ್ಕಿಲ್ಲ. ಈ ಬಂಧನಗಳನ್ನು ತಮ್ಮ ಪಕ್ಷದ ನಾಯಕತ್ವವು ಪ್ರತಿಭಟಿಸಿ, ಕಾಮ್ರೇಡುಗಳ ಬಿಡುಗಡೆಯನ್ನು ಒತ್ತಾಯಿಸದೆ ಇದ್ದುದಕ್ಕಾಗಿ ಭೂಪೇಶ್‌ಗುಪ್ತರೇ ತಮ್ಮ ನಾಯಕತ್ವವನ್ನು ಟೀಕಿಸಿದುದೂ ಅವರ ನೆನಪಿನಲ್ಲಿರಬೇಕು. ಇವೆಲ್ಲ ಆದ ನಂತರವೂ ತಮ್ಮ ಪಕ್ಷದ ನಾಯಕತ್ವದ ಸಹೋದ್ಯೋಗಿಗಳ ಬೂರ್ಜ್ವಾ ರಾಷ್ಟ್ರೀಯತೆಯನ್ನು ಟೀಕಿಸದೆ ಭೂಪೇಶ್‌ಗುಪ್ತರು ಚೀನದ ಕಮ್ಯುನಿಸ್ಟ್ ಪಕ್ಷಕ್ಕೆ ಬಯ್ಯುತ್ತಿದ್ದಾರೆ. ಇತಿಹಾಸದ ಬಗ್ಗೆ ಗೌರವ ಇರಲಿ!

ಅನಂತರದ ದಾಖಲೆ :

ಅನಂತರದಿಂದ ನಮ್ಮ ದಾಖಲೆಗಳೇನು ಮತ್ತು ಭೂಪೇಶ್‌ಗುಪ್ತರ ಪಕ್ಷದ ದಾಖಲೆಗಳೇನು ?

ಚೀನದ ಅಥವಾ ಸೋವಿಯತ್ ದೇಶದ ಕಮ್ಯುನಿಸ್ಟ್ ಪಕ್ಷಗಳ ಹಾದಿಯನ್ನೆಲ್ಲ ಕುರುಡರಂತೆ ಅನುಸರಿಸಲು ನಾವು ನಿರಾಕರಿಸಿದೆವು. ಅವರು ಸರಿಯಾದ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ನಿಲುವನ್ನು ತಳೆದಿದ್ದಾರೆಂದು ಅನ್ನಿಸಿದ ಸಂದರ್ಭಗಳಲ್ಲಿ ಅವರನ್ನು ಬೆಂಬಲಿಸಿದೆವು. ಅವರು ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಹೋರಾಟದಲ್ಲಿ ರಾಜಿಮಾಡಿಕೊಳ್ಳುತ್ತಿದ್ದಾರೆಂದು ಕಂಡುಬಂದಾಗ ಅವರನ್ನು ಟೀಕಿಸಲು ನಾವು ಹಿಂಜರಿಯಲಿಲ್ಲ.

1964ರ ಆರಂಭದಲ್ಲಿ ಸೈದ್ಧಾಂತಿಕ ಚರ್ಚೆಗಳಿಗಾಗಿ ಕರಡು ದಾಖಲೆಯೊಂದನ್ನು ನಾವು ಬಿಡುಗಡೆ ಮಾಡಿರುವುದು ಭೂಪೇಶ್‌ಗುಪ್ತ ಅವರಿಗೆ ತಿಳಿದಿರಬೇಕು. ಅದರ ಪೀಠಿಕೆಯನ್ನು ಗಮನಿಸಿದರೆ, ಚೀನ, ಭಾರತೀಯ ಬಂಡವಾಳಶಾಹಿ ವರ್ಗವನ್ನು ದಳ್ಳಾಳಿ ಬಂಡವಾಳಶಾಹಿ ವರ್ಗವೆಂದು ವಿವರಿಸಿ ಭಾರತೀಯ ಸನ್ನಿವೇಶದ ಬಗ್ಗೆ ಬರೆದ ಅನೇಕ ಲೇಖನಗಳನ್ನು ನಾವು ಒಪ್ಪದೆ ಹೇಳಿಕೆಯನ್ನು ಕೊಟ್ಟಿರುವುದು ಅವರಿಗೆ ಕಾಣಬರುತ್ತದೆ. ಊಳಿಗಮಾನ್ಯ ವರ್ಗದೊಡನೆ ಮೈತ್ರಿ ಹೊಂದಿರುವ ಮತ್ತು ವಿದೇಶಿ ಏಕಸ್ವಾಮ್ಯ ಬಂಡವಾಳದೊಡನೆ ಸಹಕರಿಸುತ್ತಿರುವ ದೊಡ್ಡ ಬಂಡವಾಳಶಾಹಿ ವರ್ಗವೇ ಮುಂದಾಳಾಗಿರುವ ಬಂಡವಾಳಶಾಹಿ-ಭೂಮಾಲೀಕಪ್ರಭುತ್ವ ಎಂದು ನಾವು ವಿವರಿಸಿದ್ದೆವು. ಪಕ್ಷದ ಆರನೇ ಅಧಿವೇಶನದಲ್ಲಿ ಭೂಪೇಶ್‌ಗುಪ್ತ ಅವರೂ ಇದೇ ವಿವರಣೆಯನ್ನು ಕೊಟ್ಟಿದ್ದರು. ಆದರೆ ನಂತರ ಭಾರತದಲ್ಲಿನ ಪ್ರಭುತ್ವ ಒಂದು ರಾಷ್ಟ್ರೀಯ ಬಂಡವಾಳಗಾರರದ್ದು ಎಂಬ ವಿವರಣೆಗೆ ಬದಲಾಯಿಸಿದರು.

ಭಾರತವು ನೆಹರು ಅವರ ನಾಯಕತ್ವದಲ್ಲಿ ಸಮಾಜವಾದಿ ಹಾದಿಯನ್ನು ಹಿಡಿದಿದೆ ಎಂದು ರುಬೆನ್‌ಸ್ಟೈನ್ ಅವರು ಮಾಸ್ಕೋದ ನ್ಯೂಟೈಮ್ಸ್ ಪತ್ರಿಕೆಯಲ್ಲಿ ಬರೆದದ್ದನ್ನು ಆಗಿನ ಐಕ್ಯ ಕಮ್ಯುನಿಸ್ಟ್ ಪಕ್ಷವು ಚರ್ಚಿಸಿ ಅಂಗೀಕರಿಸದೆ ಬಿಟ್ಟಿತ್ತು. ಹೀಗಾದ ಮೇಲೂ ಕೆಲವು ನಾಯಕರು ಈ ತಿಳುವಳಿಕೆಗೇ ಅಂಟಿಕೊಂಡದ್ದರಿಂದ ಪಕ್ಷವು ಒಡೆಯಿತು. ಈ ಹೊತ್ತಿಗೂ ಸಿ ಪಿ ಐ,ನ ಡಾಂಗೆವಾದಿಗಳು ಇದಕ್ಕೆ ಅಂಟಿಕೊಂಡಿದ್ದಾರೆ.

ಚೀನ, ಸೋವಿಯತ್ ಪಕ್ಷಗಳ ಬಗ್ಗೆ ಧೋರಣೆ :

ನಮ್ಮ ಪಕ್ಷದ ಬಗ್ಗೆ ಹೇಳುವುದಾದರೆ, ಈ ಎರಡೂ ದೊಡ್ಡ ಪಕ್ಷಗಳು ಭಾರತೀಯ ಸನ್ನಿವೇಶದ ಬಗ್ಗೆ ಮಾಡಿದ್ದ ವಿವರಣೆಯನ್ನು ತ್ಯಜಿಸಿ ನಾವು ನಮ್ಮ ಮಾರ್ಕ್ಸ್‌ವಾದ-ಲೆನಿನ್‌ವಾದದ ತಿಳುವಳಿಕೆ ಮತ್ತು ನಮ್ಮ ದೇಶದ ಸ್ಥಿತಿಗತಿಗಳಿಗೆ ಅದರ ಅನ್ವಯ ಇವುಗಳನ್ನು ಅನುಸರಿಸಿ ನಮ್ಮ ಕಾರ್ಯಕ್ರಮವನ್ನು ಚರ್ಚಿಸಿ ತೀರ್ಮಾನಿಸಿದೆವು. ಈ ಕಾರ್ಯಕ್ರಮವು ಕಾಲ ಮತ್ತು ಅನುಭವಗಳ ಪರೀಕ್ಷೆಗಳನ್ನು ಗೆದ್ದಿದೆ ಎಂಬುದರ ಬಗ್ಗೆ ಇಂದು ನಮಗೆ ಹೆಮ್ಮೆಯಿದೆ.

ಅನಂತರ? ನಾವು ಚೀನದ ಕಮ್ಯುನಿಸ್ಟ್ ಪಕ್ಷದ ನಾಯಕರ ಬಗ್ಗೆ ಸುಮ್ಮನಿಲ್ಲ. ಚೀನವನ್ನು ಅಮೆರಿಕದ ಸಾಮ್ರಾಜ್ಯಶಾಹಿಗಳು ಆಕ್ರಮಿಸಿ,

ಎಲ್ಲ ರೀತಿಯ ಪ್ರತಿಬಂಧಕಗಳನ್ನು ಹಾಕಿದಾಗ, ಚೀನದ ಜನತೆ ಮತ್ತು ಕಮ್ಯುನಿಸ್ಟ್ ಪಕ್ಷಕ್ಕೆ ನಮ್ಮ ಸೌಹಾರ್ದತೆ ಮತ್ತು ಬೆಂಬಲವನ್ನು ಪ್ರಕಟದೆವು. ಆದರೆ ಚೀನದ ನಾಯಕತ್ವವು 1957 ಮತ್ತು 1960ರ ಅನಂತರ ರಾಷ್ಟ್ರೀಯ ದಾಖಲೆಗಳನ್ನು ದೂರ ಸರಿಸಲಾರಂಭಿಸಿದಾಗ ನಾವು ಚೀನಿ ನಾಯಕತ್ವದ ಮೂರು ಜಗತ್ತುಗಳ ಸಿದ್ಧಾಂತವನ್ನು ಮತ್ತು ಸೋವಿಯತ್ ಒಕ್ಕೂಟವನ್ನು ಸಮಾಜವಾದಿ-ಸಾಮ್ರಾಜ್ಯಶಾಹಿ ಎಂದು ಕರೆದು ಅಮೆರಿಕದ ಸಾಮ್ರಾಜ್ಯಶಾಹಿಯ ಬದಲು ಅದನ್ನು ತಮ್ಮ ಮುಖ್ಯ ಶತ್ರುವನ್ನಾಗಿ ಮಾಡಿಕೊಂಡದ್ದನ್ನು ಉಗ್ರವಾಗಿ ಟೀಕಿಸಿದೆವು. ಚೀನವು ಅಂಗೋಲ, ಬಾಂಗ್ಲಾದೇಶಗಳ ರಾಷ್ಟ್ರೀಯ ವಿಮೋಚನಾ ಚಳುವಳಿಗಳನ್ನು ವಿರೋಧಿಸಿದಾಗ, ಚಿಲಿಯ ಫ್ಯಾಸಿಸ್ಟ್ ಪಿನೋಚೆ ಸರ್ವಾಧಿಕಾರವನ್ನು, ಜೈರೆಯ ಮೊಬುಟು ಆಡಳಿತವನ್ನು ಬೆಂಬಲಿಸಿದಾಗ, ವಿಯೆಟ್ನಾಂ ಮೇಲೆ ಚೀನ ಆಕ್ರಮಣಮಾಡಿದಾಗ, ಕಂಪೂಚಿಯಾದ ಪೋಲ್‌ಪೊಟ್ ಆಡಳಿತದಲ್ಲಿ ಹಸ್ತಕ್ಷೇಪಮಾಡಿ ಅದಕ್ಕೆ ಬೆಂಬಲ ಮುಂದುವರೆಸಿದಾಗ, ನ್ಯಾಟೋಗೆ ಬೆಂಬಲನೀಡಿ, ಜಪಾನಿನ ಮಿಲಿಟರಿ ನಿರ್ಮಿತಿಗೆ ಬೆಂಬಲಕೊಟ್ಟಾಗ ನಾವು ಚೀನವನ್ನು ತೀಕ್ಷ್ಣವಾಗಿ ಟೀಕಿಸಿದ್ದೇವೆ. ಚೀನದ ಈ ಕ್ರಮಗಳು, ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳ ವಿಶ್ವದ್ಯಾಂತ ಚಳುವಳಿಯ ಹಿತಾಸಕ್ತಿಗಳಿಗೆ ವಿರೋಧವಾಗಿವೆ. ಇದೇ ಸಮಯದಲ್ಲಿ, ಪ್ರತಿಕ್ರಾಂತಿಯ ವಿರುದ್ಧ ಸೋವಿಯತ್ ಒಕ್ಕೂಟವು ಜೆಕೊಸ್ಲೊವಾಕಿಯದಲ್ಲಿ ಪ್ರವೇಶ ಮಾಡಿದಾಗ, ಅಮೆರಿಕದ ಸಾಮ್ರಾಜ್ಯಶಾಹಿ ಯೋಜನೆಗಳನ್ನು ಕಂಗೆಡಿಸಲು ಆಫ್‌ಘಾನಿಸ್ತಾನದಲ್ಲಿ ಸೋವಿಯೆತ್ ಒಕ್ಕೂಟ ಪ್ರವೇಶಿಸಿದಾಗ ಮತ್ತು ಆಫ್ರಿಕನ್ ವಿಮೋಚನಾ ಹೋರಾಟಗಳಿಗೆ ಸೋವಿಯೆತ್ ಒಕ್ಕೂಟ, ಜರ್ಮನ್ ಡೆಮಾಕ್ರಾಟಿಕ್ ರಿಪಬ್ಲಿಕ್ ಮತ್ತು ಕ್ಯೂಬಗಳು ಸಹಾಯ ನೀಡಿದಾಗ ಇವೆಲ್ಲವನ್ನು ಬೆಂಬಲಿಸುವುದರಲ್ಲಿ ನಾವು ಕ್ಷಣಮಾತ್ರಕ್ಕೂ ಹಿಂಜರಿಯಲಿಲ್ಲ. ಹಾಗೆಯೇ ಸೋವಿಯೆತ್ ನೀತಿಗಳು ಪ್ರಜಾಪ್ರಭುತ್ವವಾದಿ ಚಳುವಳಿಗೆ ಹಾನಿಮಾಡಿದಾಗ ಅದರಲ್ಲೂ ನಮ್ಮ ದೇಶದಲ್ಲಿ ಉದಾಹರಣೆಗೆ, 1973ರ ಅದ್ಭುತ ರೈಲ್ವೆ ಮುಷ್ಕರವನ್ನು ಅದು ಹೀಗಳೆದಾಗ ಅಥವಾ ಕಾಂಗ್ರೆಸ್ ಆಡಳಿತಗಾರರ ಆಂತರಿಕ ತುರ್ತುಪರಿಸ್ಥಿತಿ ಹೇರಿಕೆಯನ್ನು ಅದು ಬೆಂಬಲಿಸಿದಾಗ ನಾವು ಅವರನ್ನು ಸಾಕಷ್ಟು ಟೀಕಿಸಿದ್ದೇವೆ.

ಇವೆಲ್ಲವನ್ನೂ ಮಾಡುವುದಕ್ಕೆ ನಮಗೆ ಸಾಧ್ಯವಾದುದು, ನಾವು ದೃಢವಾಗಿ ಬಂಡವಾಳಶಾಹಿ ರಾಷ್ಟ್ರೀಯತೆಯ ವಿರುದ್ಧ ಹೋರಾಡಿದ್ದರಿಂದ, ಮಾರ್ಕ್ಸ್‌ವಾದ-ಲೆನಿನ್‌ವಾದ, ಕಾರ್ಮಿಕವರ್ಗದ ಅಂತರರಾಷ್ಟ್ರೀಯತೆ, ಸಾಮ್ರಾಜ್ಯಶಾಹಿ ವಿರೋಧ ಇವುಗಳನ್ನೇ ನಾವು ಆದರಿಸಿದ್ದರಿಂದ ಮತ್ತು ರಾಷ್ಟ್ರೀಯ ವಿಮೋಚನಾ ಚಳುವಳಿಗಳನ್ನು ಬೆಂಬಲಿಸಿದ್ದರಿಂದ ನೀತಿಗಳು ಮತ್ತು ಆಚರಣೆಗಳನ್ನು ನಿರ್ಧರಿಸುವಾಗ ನಮಗೆ ಇದೇ ಕೈದೀಪವಾಗಿತ್ತು. ಈ ಬಗ್ಗೆ ನಮಗೆ ಇಂದು ಹೆಮ್ಮೆ ಇದೆ.

ಬಂಡವಾಳಶಾಹಿ ರಾಷ್ಟ್ರೀಯವಾದ:

ಈ ವಿಚಾರದಲ್ಲಿ ಭೂಪೇಶ್‌ಗುಪ್ತ ಅವರ ಪಕ್ಷದ ದಾಖಲೆಗಳನ್ನು ದೀರ್ಘವಾಗಿ ಪರಿಶೀಲಿಸುವುದಕ್ಕೆ ನಮಗೆ ಇಷ್ಟವಿಲ್ಲ. ಆದರೆ ಭಾರತ-ಚೀನ ಗಡಿಘರ್ಷಣೆಯ ಸಮಯದಲ್ಲಿ ನಡೆದದ್ದನ್ನು ಹೇಳದೆ ಇರಬಾರದು. ಭೂಪೇಶ್‌ಗುಪ್ತರೂ ಸೇರಿದ್ದ ಡಾಂಗೆವಾದಿ ನಾಯಕತ್ವವು ಆಗ ಬಹಳ ಕೆಟ್ಟದಾಗಿ ನಡೆದುಕೊಂಡಿತು. ಭಾರತ ಸರ್ಕಾರವು ಒಪ್ಪಿಕೊಂಡ ಮೇಲೂ ಕೊಲಂಬೋ ಸಲಹೆಗಳನ್ನು ಅದು ವಿರೋಧಿಸುತ್ತಿತ್ತು. ನಂತರ 1965ರ ಭಾರತ-ಪಾಕಿಸ್ತಾನ ಯುದ್ಧದ ಸಮಯದಲ್ಲೂ ಅವರು ತಾಷ್ಕೆಂಟ್ ಮಾತುಕತೆಗಳ ಸೋವಿಯೆಟ್ ಸಲಹೆಯನ್ನು ವಿರೋಧಿಸಿ, ಭಾರತದ ಸೈನ್ಯವು ಲಾಹೋರಿಗೆ ನುಗ್ಗಬೇಕೆಂದು ಸಲಹೆಮಾಡಿತು.

ಸೋವಿಯೆತ್ ಒಕ್ಕೂಟವು ಜೆಕೊಸ್ಲೊವಾಕಿಯದಲ್ಲಿ ಪ್ರವೇಶಿಸಿದಾಗಲೂ ಭೂಪೇಶ್‌ಗುಪ್ತರ ಪಕ್ಷವು ಬಹಳ ಕಾಲದವರೆಗೆ ಅದನ್ನು ಒಪ್ಪುತ್ತಿರಲಿಲ್ಲ. ಸೋವಿಯೆತ್ ಪ್ರವೇಶವನ್ನು ವಿರೋಧಿಸುವ ಚೀನಿ ನಾಯಕತ್ವದ ನಿಲುವನ್ನೇ ಅವರ ಪಕ್ಷದ ಅನೇಕರು ತಳೆದಿದ್ದರು. ಇವೆಲ್ಲವೂ ಬಂಡವಾಳಶಾಹಿ ರಾಷ್ಟ್ರೀಯವಾದದಿಂದ ಬಂದಿರುವುದೇ ಹೊರತು, ಕಾರ್ಮಿಕ ಅಂತರರಾಷ್ಟ್ರೀಯತೆಗೆ ಇದಕ್ಕೂ ಏನೂ ಸಂಬಂಧ ಇಲ್ಲ.

ಬಂಡವಾಳಶಾಹಿ ರಾಷ್ಟ್ರೀಯವಾದ ಮತ್ತು ಮಾರ್ಕ್ಸ್‌ವಾದ-ಲೆನಿನ್‌ವಾದದ ಅಪವ್ಯಾಖ್ಯಾನದಿಂದ ಅವರ ಪಕ್ಷವು 1975ರ ಆಂತರಿಕ ತುರ್ತುಪರಿಸ್ಥಿತಿಯನ್ನು ಬೆಂಬಲಿಸುವಂಥ ಮಟ್ಟಕ್ಕಿಳಿಯಿತು ಎಂಬುದನ್ನು ಭೂಪೇಶ್ ಗುಪ್ತರಿಗೆ ನಾವು ನೆನಪಿಸಬೇಕಿಲ್ಲ.

ಮಾರ್ಕ್ಸ್‌ವಾದಿ ವಿರೋಧಿ ತಿಳುವಳಿಕೆ :

ಭಾರತ ಮತ್ತು ಚೀನದ ಸಂಬಂಧಗಳು ಉತ್ತಮಗೊಂಡರೆ ಸೋವಿಯೆತ್ ಒಕ್ಕೂಟದೊಡನೆ ಭಾರತಕ್ಕಿರುವ ಸಂಬಂಧ ಕೆಟ್ಟುಹೋಗುತ್ತದೆ ಎಂದು ಭೂಪೇಶ್‌ಗುಪ್ತ ಬರೆದಿರುವುದರಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವಿರೋಧಿ ಧೋರಣೆಯೇ ಇವತ್ತಿಗೂ ಮುಂದುವರೆದಿದೆ. ಭಾರತದ ವಿದೇಶಿ ನೀತಿಯು ಒಬ್ಬ ನೆಹರು ಅಥವಾ ಇಂದಿರಾಗಾಂಧಿಯ ಸೃಷ್ಟಿ ಎಂದು ತಪ್ಪಾಗಿ ತಿಳಿದುಕೊಂಡು, ವರ್ಗಾಶಕ್ತಿಗಳನ್ನು ಈಡೇರಿಸಿಕೊಳ್ಳುವ ಹಂಬಲದಲ್ಲಿರುವ ಆಳುವವರ್ಗಗಳ ವರ್ಗನೀತಿ ಎಂಬುದನ್ನು ಅರ್ಥಮಾಡಿಕೊಳ್ಳದಿರುವುದರಿಂದ ಹೀಗಾದಿದೆ. ಭಾರತವು ಬಂಡವಾಳಶಾಹಿ ಪಥವನ್ನು ಅನುಸರಿಸಲು ದೇಶದಲ್ಲಿ ಭಾರಿ ಕೈಗಾರಿಕೆಗಳನ್ನು ಆರಂಭಿಸಲು ನಿರ್ಧರಿಸಿದಾಗ ಅದರ ಸಹಾಯಕ್ಕೆ ಬಂದದ್ದು ಸೋವಿಯೆತ್ ಒಕ್ಕೂಟವೇ. ಭಾರತದ ಆಳುವವರ್ಗಗಳು ಅಮೆರಿಕದೊಡನೆ ಉತ್ತಮ ಸಂಬಂಧಗಳನ್ನು ಇರಿಸಿಕೊಳ್ಳಲು ಶ್ರಮಿಸುತ್ತಿದ್ದರೂ, ಅಮೆರಿಕದ ನವ ವಸಾಹತುಶಾಹಿ ದಬ್ಬಾಳಿಕೆಯ ಪ್ರಯತ್ನಗಳಿಂದ ಅದರೊಡನೆ ಘರ್ಷಣೆಗಳನ್ನು ಹೊಂದುತ್ತಿದ್ದಾರೆ. ಅಂಥ ಪ್ರತಿಯೊಂದು ಸಂದರ್ಭದಲ್ಲೂ ಭಾರತದ ನೆರವಿಗೆ ಬಂದಿರುವುದು ಸೋವಿಯೆತ್ ಒಕ್ಕೂಟವೇ.

ಸೋವಿಯೆತ್ ಒಕ್ಕೂಟದೊಡನೆ ಉತ್ತಮ ಸಂಬಂಧಗಳನ್ನು ಇರಿಸಿಕೊಳ್ಳಲು ಭಾರತದ ಆಳುವ ವರ್ಗಗಳಿಗೆ ಆಸಕ್ತಿಯಿದೆ ಮತ್ತು ಅದರಿಂದ ಬರುವ ಬಲವನ್ನು, ಸಾಮ್ರಾಜ್ಯಶಾಹಿಗಳ ಮೇಲೆ ಒತ್ತಡ ತರಲು ಮತ್ತು ವ್ಯವಹಾರ ಮಾಡಲು ಬಳಸುವ ಆಶಯವೂ ಇದೆ.

ಈ ವಿದೇಶಿ ನೀತಿಯ ಕರ್ತರು ಕೆಲವೇ ವ್ಯಕ್ತಿಗಳು ಎಂದು ಭೂಪೇಶ್ ಗುಪ್ತರ ಪಕ್ಷವು ಸೀಮಿತಗೊಳಿಸಿದ್ದರಿಂದಲೇ ಅವರು ಆಂತರಿಕ ತುರ್ತುಪರಿಸ್ಥಿತಿಯನ್ನು ಇಂದಿರಾಗಾಂಧಿಯ ಪ್ರಗತಿಶೀಲ ವಿದೇಶಿ ನೀತಿ ಎಂದು ಬೆಂಬಲಿಸುವಂತಾಯಿತು. ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದ್ದರ ತಪ್ಪಿನ ಬಗ್ಗೆ ಸ್ವವಿಮರ್ಶೆಯೇನೋ ಮಾಡಿಕೊಂಡಿದ್ದಾರೆ. ಆದರೆ ಅದರ ಪೂರ್ಣ ಪರಿಣಾಮಗಳನ್ನು ಇನ್ನೂ ಅರ್ಥಮಾಡಿಕೊಂಡಿಲ್ಲ.

ಐಕ್ಯತೆಗೆ ನಮ್ಮ ಬೆಂಬಲ :

ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಕಾರ್ಮಿಕ ಅಂತರರಾಷ್ಟ್ರೀಯತೆಯ ತಳಹದಿಯ ಮೇಲೆ ಸಮಾಜವಾದಿ ದೇಶಗಳ ಐಕ್ಯತೆ ಮತ್ತು ವಿಶ್ವ ಕಮ್ಯುನಿಸ್ಟ್ ಚಳುವಳಿ ಐಕ್ಯತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬೆಂಬಲಿಸುತ್ತದೆ. ಸೋವಿಯೆತ್ ಒಕ್ಕೂಟವನ್ನು ಒಂದು ದೊಡ್ಡ ಸಮಾಜವಾದಿ ದೇಶವೆಂದು ಮತ್ತು ಸೋವಿಯತ್ ಕಮ್ಯುನಿಸ್ಟ್ ಪಕ್ಷವನ್ನು ಒಂದು ದೊಡ್ಡ ಕಮ್ಯುನಿಸ್ಟ್ ಪಕ್ಷವೆಂದು ನಾವು ಪರಿಗಣಿಸುತ್ತೇವೆ ಮತ್ತು ಅವರನ್ನು ಸಮಾಜವಾದಿ-ಸಾಮ್ರಾಜ್ಯಶಾಹಿ ಎಂದು ವಿವರಿಸಲು ನಾವು ನಿರಾಕರಿಸುತ್ತೇವೆ. ಚೀನವನ್ನು ಒಂದು ದೊಡ್ಡ ಸಮಾಜವಾದಿ ದೇಶವೆಂದು ಮತ್ತು ಚೀನದ ಪಕ್ಷವನ್ನು ಒಂದು ದೊಡ್ಡ ಕಮ್ಯುನಿಸ್ಟ್ ಪಕ್ಷವೆಂದು ಪರಿಗಣಿಸಿ, ಅದನ್ನು ಒಂದು ಮಿಲಿಟರಿವಾದಿ ಮತ್ತು ಯಜಮಾನಿಕೆಯ ದೇಶವೆಂದು ವಿವರಿಸಲು ನಿರಾಕರಿಸುತ್ತೇವೆ. ಎರಡು ದೇಶಗಳಲ್ಲೂ ಸಮಾಜವಾದಿ ವ್ಯವಸ್ಥೆ ಇರುವುದರಿಂದ, ಮಾರ್ಕ್ಸ್‌ವಾದ-ಲೆನಿನ್‌ವಾದ ಖಂಡಿತ ಮೇಲುಗೈ ಪಡೆದು, ತಪ್ಪುಗಳನ್ನು ಮತ್ತು ವಿಕೃತಿಗಳನ್ನು ಸರಿಪಡಿಸುತ್ತದೆ ಎಂಬ ಮೊದಲ ನಂಬಿಕೆ ನಮಗಿದೆ.

ಇದು ಸೋವಿಯತ್ ಒಕ್ಕೂಟದಲ್ಲಿ ನಡೆದದ್ದನ್ನು ನೋಡಿದ್ದೇವೆ. ಚೀನದಲ್ಲಿ ಈಗ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

1957ರಲ್ಲಿ ಚೀನದಲ್ಲಿ ಆರಂಭವಾದ ಅನೇಕ ಅಡ್ಡದಾರಿಗಳು ಮತ್ತು "ಸಾಂಸ್ಕೃತಿಕ ಕ್ರಾಂತಿ"ಯ ದಶಕದಲ್ಲಿ ನಡೆದ ವಿಕೃತಿಗಳ ಪರೀಕ್ಷಣ ಈಗ ನಡೆಯುತ್ತಿದ್ದು, ತಪ್ಪುಗಳ ವಿಮರ್ಶೆಯಾಗಿ ಸರಿಪಡಿಸುವ ಕೆಲಸ ನಡೆಯುತ್ತಿದೆ. ಈಗ ಇಡೀ "ಸಾಂಸ್ಕೃತಿಕ ಕ್ರಾಂತಿ"ಯನ್ನು ಪರಿತ್ಯಜಿಸಲಾಗುತ್ತಿದೆ. ಈ ತಿದ್ದುಪಡಿಗಳನ್ನು ಆಂತರಿಕ ನೀತಿಗಳಲ್ಲಿ ಮಾತ್ರ ಮಾಡಲಾಗುತ್ತಿದೆ ಎನ್ನುವುದು ನಿಜ. ಆದರೆ ವಿದೇಶಿ ನೀತಿಯ ಮೇಲೆ ಈ ಬದಲಾವಣೆಗಳು ಪರಿಣಾಮ ಬೀರುತ್ತಿಲ್ಲ ಎಂದು ನಾವು ಇದಕ್ಕೆ ಕುರುಡರಾಗಬೇಕಿಲ್ಲ. ಆಂತರಿಕ ನೀತಿಗಳಲ್ಲಿ ಆದ ತಿದ್ದುಪಡಿಗಳು ಇಷ್ಟರಲ್ಲೇ ವಿದೇಶಿ ನೀತಿಯ ಮೇಲೂ ಪ್ರಭಾವ ಬೀರಲಿದೆ ಎಂಬ ನಂಬಿಕೆ ನಮಗಿದೆ.

ಚೀನದ ಪರಿಸ್ಥಿತಿಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಅನ್ವಯಿಸುವುದರಲ್ಲಿ ಮತ್ತು ಚೀನದ ಮಹತ್ ಕ್ರಾಂತಿಯನ್ನು ಸಫಲಗೊಳಿಸುವುದರಲ್ಲಿ ಚೀನದ ಕಮ್ಯುನಿಸ್ಟ್ ಪಕ್ಷ ಮತ್ತು ಮಾವೋತ್ಸೆತುಂಗ್ ಅವರು ವಹಿಸಿದ ಮಹತ್ವ ಪಾತ್ರವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸೋವಿಯೆತ್ ಒಕ್ಕೂಟ ಅಥವಾ ಚೀನವನ್ನು ಮರೆಯುವಂತೆ ಚರಿತ್ರೆಯನ್ನು ಸುಳ್ಳುಗೊಳಿಸುವುದನ್ನು ಮಾರ್ಕ್ಸ್‌ವಾದ ನಮಗೆ ಹೇಳಿಕೊಟ್ಟಿಲ್ಲ.

ಸೋವಿಯೆತ್ ಮತ್ತು ಚೀನದ ಕಮ್ಯುನಿಸ್ಟ್ ಪಕ್ಷಗಳೆರಡೂ ನಮ್ಮನ್ನು ಅಲ್ಲಗಳೆದಿವೆ. ಆದರೆ ಅದರಿಂದ ನಾವು ಆ ಪಕ್ಷಗಳ ಬಗ್ಗೆ ಇಟ್ಟುಕೊಂಡಿರುವ ಧೋರಣೆ ಬದಲಾಗಿಲ್ಲ. ಅವರು ನಮ್ಮ ಬಗ್ಗೆ ಏನು ಹೇಳುತ್ತಾರೆ ಎಂಬುದರ ಮೇಲೆ ನಮ್ಮ ದೃಷ್ಟಿಕೋನ ನಿಂತಿಲ್ಲ. ಅಂತರರಾಷ್ಟ್ರೀಯ ಕಾರ್ಮಿಕವರ್ಗದ ಮತ್ತು ನಮ್ಮ ದೇಶದ ಕಾರ್ಮಿಕವರ್ಗದ ಚಳುವಳಿಯ ಹಿತಾಸಕ್ತಿಗಳು ಅದನ್ನು ನಿರ್ಧರಿಸುತ್ತವೆ.

ಸತ್ಯದ ವಿಕೃತಿ :

ಚೀನದ ಜೊತೆ ಸಂಬಂಧಗಳನ್ನು ಸರಿಪಡಿಸಿಕೊಳ್ಳುವುದರ ವಿರುದ್ಧ ತಮ್ಮ ವಾದವನ್ನು ಮಂಡಿಸುವಾಗ ಭೂಪೇಶ್‌ಗುಪ್ತರು ಅಂಶಗಳನ್ನು ವಿಕೃತಿಗೊಳಿಸುವವರೆಗೂ ಹೋಗಿದ್ದಾರೆ. ನಮ್ಮ ಕಮ್ಯುನಿಸ್ಟ್ ಚಳುವಳಿಯ ಹೊಸ ಜನಾಂಗಕ್ಕೆ ಈ ಅಂಶಗಳು ಗೊತ್ತಿಲ್ಲವೆಂದು ಮತ್ತು ಅದರಿಂದ ತಾವು ಈ ವಿಕೃತಿಗಳನ್ನು ಮಾಡಬಹುದೆಂದು ತಿಳಿದುಕೊಂಡಿದ್ದಾರೆ.

ನಾವು ಮೊದಲೇ ಸೂಚಿಸಿರುವ ಹಾಗೆ, ಚೀನದ ನಾಯಕತ್ವದ ಜೊತೆ ನಡೆಸಿದ ಮಾತುಕತೆಗಳ ಬಗ್ಗೆ ಹೇಳುವಾಗ, ಅವರು ನೆಹರು ಮತ್ತು ಕಾಂಗ್ರೆಸ್ಸನ್ನು ಹಿಂಬಾಲಿಸುವಂತೆ ಹೇಳಿದ್ದನ್ನು ಮಾತ್ರ ಬರೆಯುತ್ತಾರೆಯೇ ಹೊರತು, ರಷ್ಯಕೂಡ ಅದೇ ಉಪದೇಶವನ್ನು ಕೊಟ್ಟದ್ದನ್ನು ಹೇಳುವುದನ್ನು ಮರೆತುಬಿಡುತ್ತಾರೆ. ಸೋವಿಯೆತ್ ಕಮ್ಯುನಿಸ್ಟ್ ಪಕ್ಷವು ತನ್ನ 20ನೇ ಅಧಿವೇಶನದಲ್ಲಿ ಮತ್ತು ಚೀನದ ಪಕ್ಷವು ತನ್ನ ಎಂಟನೇ ಅಧಿವೇಶನದಲ್ಲಿ, ಭಾರತದ ಪರಿಸ್ಥಿತಿಯ ಬಗ್ಗೆ ಒಂದೇ ರೀತಿಯ ವಿವರಣೆಯನ್ನು ಕೊಟ್ಟಿದ್ದವು.

ಭಾರತ-ಚೀನ ಗಡಿಪ್ರಶ್ನೆಯ ಬಗ್ಗೆ, 1960ರಲ್ಲಿ ಚೀನದ ನಾಯಕ ಚೌ ಎನ್‌ಲಾಯ್ ಅವರು ಭಾರತಕ್ಕೆ ಭೇಟಿನೀಡಿ, ಗಡಿಪ್ರಶ್ನೆಯ ಬಗ್ಗೆ ಮಾತುಕತೆ ನಡೆಸಲು ನೆಹರು ಅವರಿಗೆ ಸಲಹೆಮಾಡಿದ್ದರು. ಈ ಭೇಟಿ ಮತ್ತು ನೆಹರು ಅವರೊಂದಿಗಿನ ಮಾತುಕತೆಗಳನ್ನು ಐಕ್ಯ ಕಮ್ಯುನಿಸ್ಟ್ ಪಕ್ಷ ಸ್ವಾಗತಿಸಿತ್ತು. ಇದನ್ನು ಭೂಪೇಶ್‌ಗುಪ್ತ ಮರೆಯುತ್ತಾರೆ. ಏಕೆಂದರೆ ಮರೆತರೆ ಅವರಿಗೆ ಅನುಕೂಲ.

ಆಗ ಮತ್ತು ಈಗ:

ಭಾರತ-ಚೀನ ಗಡಿಯ ಬಗ್ಗೆ ಇಂದು ಭೂಪೇಶ್‌ಗುಪ್ತ ಏನು ಹೇಳುತ್ತಾರೆ? ಡೆಂಗ್‌ಕ್ಸಿಯೋಪಿಂಗ್ ಅವರ ಸಲಹೆಯ ಪ್ರಕಾರ ಚೀನವು ಅಕ್ರಮವಾಗಿ ಆಕ್ರಮಿಸಿಕೊಂಡಿರುವ 43,000 ಚದುರ ಕಿ. ಮೀ.ಗಳನ್ನು ಭಾರತ ಮರೆತುಬಿಡಬೇಕೆಂಬ ಅರ್ಥವಿದೆ ಎಂದು ಅವರು ಪಶ್ಚಿಮವಲಯದ ಬಗ್ಗೆ ಹೇಳುತ್ತಾರೆ. 1959ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿಯ ಗೊತ್ತುವಳಿಯನ್ನು ಭೂಪೇಶ್‌ಗುಪ್ತ ಮರೆತುಬಿಟ್ಟಿದ್ದಾರೆಯೇ?

"ಪಶ್ಚಿಮವಲಯದ ಬಗ್ಗೆ ಹೇಳುವುದಾದರೆ, ಪಾರಂಪರಿಕ ಗಡಿಯನ್ನೇ ಒಪ್ಪಿಕೊಳ್ಳಬೇಕೆಂಬ ಸರ್ಕಾರದ ನಿಲುವು ಸರಿಯಾಗಿದೆ. ಆದರೆ ಪಾರಂಪರಿಕ ಗಡಿ ಯಾವುದು ಎಂಬುದರ ಬಗ್ಗೆ ವಿವಾದವಿದೆ. ಸಂಸತ್ತಿನಲ್ಲಿ ಪಂಡಿತ ನೆಹರು ಅವರು 'ಇದೊಂದು ಸಂಕೀರ್ಣ ವಿಚಾರ... ಗಡಿ ತುಂಬ ಊಹೆಗೆ ಸೇರಿದ್ದು, ಏಕೆಂದರೆ ಮ್ಯಾಕ್‌ಮೋಹನ್ ರೇಖೆಯ ವಿಚಾರದಲ್ಲಿ ಸ್ಪಷ್ಟತೆ ಇರುವ ಹಾಗೆ ಇಲ್ಲಿ ಸರಿಯಾದ ರೇಖೆ ಇಲ್ಲ' ಎಂದು ಹೇಳಿದ್ದಾರೆ. ನೆಹರು ಅವರ ಸಂಸತ್ ಭಾಷಣವನ್ನು ಉಲ್ಲೇಖಿಸಿದ ಮೇಲೆ, ಗೊತ್ತುವಳಿಯು "ಇವೆಲ್ಲದರಿಂದ, ಪಾರಂಪರಿಕ ರೇಖೆಯ ನಿರ್ಧಾರಕ್ಕೆ ನಮ್ಮ ಸರ್ಕಾರ ಮತ್ತು ಚೀನದ ಸರ್ಕಾರ ಸೌಹಾರ್ದ ಚರ್ಚೆಗಳನ್ನು ನಡೆಸುವುದು ಅನಿವಾರ್ಯವಾಗುತ್ತದೆ" ಎಂದು ಹೇಳಿತ್ತು. 1959ರಲ್ಲಿ ಭೂಪೇಶ್‌ಗುಪ್ತ ಅವರು ಪಶ್ಚಿಮವಲಯವನ್ನು ಪೂರ್ವ ಮತ್ತು ಮಧ್ಯವಲಯಗಳಿಗಿಂತ ಭಿನ್ನವಾಗಿ ಪರಿಗಣಿಸಲು ಸಿದ್ಧರಿದ್ದರು. ಅವರು ಈಗ ಆ ನಿಲುವನ್ನು ಬಿಟ್ಟುಕೊಟ್ಟು, ದೇಶದ ಉಗ್ರಪ್ರತಿಗಾಮಿಗಳ ನಿಲುವನ್ನು ತಳೆಯುತ್ತಿರುವುದೇಕೆ? ಏಕೆಂದರೆ ಹೇಗಾದರೂ ಚೀನವನ್ನು ಬಡಿಯಬೇಕು ಅದಕ್ಕೆ ಯಾವ ಬಡಿಗೆಯಾದರೂ ಸರಿ ಎಂತಲೆ?

ಚೀನದ ಜೊತೆ ಸಂಬಂಧಗಳನ್ನು ಸರಿಪಡಿಸಿಕೊಳ್ಳುವುದು ಅಗತ್ಯ. ಇದರಿಂದ ಆ ವಲಯದ ಬಿಕ್ಕಟ್ಟು ಬಗೆಹರಿ

ಉತ್ತದೆ, ಎರಡು ದೇಶಗಳ ನಡುವೆ ವ್ಯಾಪಾರ ಮತ್ತಿತರ ಸಂಬಂಧಗಳು ವಿಸ್ತರಿಸುತ್ತವೆ ಎಂದು ದೇಶದ ಆಳುವ ವರ್ಗಗಳೇ ಭಾವಿಸುತ್ತಿರುವಾಗ ಭೂಪೇಶ್‌ಗುಪ್ತರು ಈ ಕ್ರಮದ ಬಗ್ಗೆ ಎಚ್ಚರಿಕೆ ನೀಡುತ್ತಿದ್ದಾರೆ.

ಎರಡು ನೀತಿಗಳು–ಎರಡು ಗುರಿಗಳು :

"ಕಮ್ಯುನಿಸ್ಟ್ ಪಕ್ಷ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳ ನಡುವೆ ಸೌಹಾರ್ದ ಸಂಬಂಧಗಳನ್ನು ತಡೆದು, ಆ ಮೂಲಕ ಎಡ ಐಕ್ಯತೆ ಅಷ್ಟೇ ಅಲ್ಲ ವಿಶಾಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನೂ ಕೆಡಿಸುವ" ಚೀನದ ಪ್ರಯತ್ನಗಳ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ಭೂಪೇಶ್ ಗುಪ್ತ ನಮಗೆ ಹೇಳಿರುವುದರ ಬಗ್ಗೆ ನಾವು ಕೃತಜ್ಞರಾಗಿದ್ದೇವೆ.

1964ರಲ್ಲಿ ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಪರಿಷ್ಕರಣವಾದಿಗಳಿಂದ ನಾವು ದೂರವಾದ ಮೇಲೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಜಗತ್ತಿನ ಎಲ್ಲ ಕ್ರಾಂತಿಕಾರಿ ಶಕ್ತಿಗಳ ಅನುಭವವನ್ನು ಪರಿಶೀಲಿಸಿದೆ ಮತ್ತು ಭಾರತೀಯ ಪರಿಸ್ಥಿತಿಗೆ, ಅನ್ವಯಿಸುವ ಮಾರ್ಕ್ಸ್‌ವಾದ–ಲೆನಿನ್‌ವಾದದ ಸ್ವಂತ ತಿಳುವಳಿಕೆ ಅದಕ್ಕೆ ದಾರಿ ತೋರಿಸಿದೆ, ಹೊರಗಿನ ಉಪದೇಶವನ್ನು ಮನ್ನಿಸದೆ, ವಿವಿಧ ಹಂತಗಳಲ್ಲಿ ತಾಂತ್ರಿಕ ನೀತಿಯನ್ನು ಮತ್ತು ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಈ ನೀತಿಯೇ ಮಾರ್ಗದರ್ಶನ ನೀಡಿರುವುದರಿಂದ ಸಿ.ಪಿ.ಐ.(ಎಂ)ನ ನೀತಿಯು ಇದುವರೆಗೆ ಹೆಚ್ಚು ಕಡಿಮೆ ಸರಿಎಂದು ಸಮರ್ಥನೆಗೊಂಡಿದೆ, ಆದರೆ ಕಾಂಗ್ರೆಸ್ಸಿನೊಡನೆ ಸಹಕರಿಸುವ ನೀತಿಯನ್ನು ಕೈಗೊಂಡ ಭೂಪೇಶ್ ಗುಪ್ತರ ಪಕ್ಷ, ಆಂತರಿಕ ತುರ್ತುಪರಿಸ್ಥಿತಿಯನ್ನು ಬೆಂಬಲಿಸುವಂಥ ದಿವಾಳಿಕೊನೆಯನ್ನು ಮುಟ್ಟಿ. ಅದು ತನ್ನ ದಾರಿಗಳನ್ನು ಈಗ ಮತ್ತೆ ಹುಡುಕಿಕೊಳ್ಳುವಂತಾಗಿದೆ.

ಎಡಪಂಥೀಯ ಐಕ್ಯತೆ :

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ದೃಷ್ಟಿಯಲ್ಲಿ ಹೇಳುವುದಾದರೆ, ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯು ಹೊರಗಿನವರ ಆದೇಶದ ಮೇಲೆ ಕಟ್ಟುವಂಥದೂ ಅಲ್ಲ, ಹೊರಗಿನವರ ಆದೇಶದ ಮೇರೆಗೆ ಕೆಡಿಸುವಂಥದೂ ಅಲ್ಲ. ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು ಕಟ್ಟಲು ಸಿ.ಪಿ.ಐ.(ಎಂ) ಬಹಳ ಕಾಲದಿಂದಲೂ ಶ್ರಮಿಸುತ್ತಿದೆ. 1967ರಲ್ಲಿ ಅಂಥ ಐಕ್ಯತೆಯನ್ನು ಕಟ್ಟಲಾಗಿತ್ತು. ಆದರೆ ಸೋಷಿಯಲಿಸ್ಟರು ಮೈತ್ರಿಕೂಟದ ಜೊತೆ ಸೇರಿದಾಗ ಮತ್ತು ಸಿ.ಪಿ.ಐ.–ಇಂಡಿಕೇಟ್ ಕಾಂಗ್ರೆಸ್ಸಿನ ಜೊತೆ ಹೋದಾಗ ಅದು ಮುರಿದು ಬಿದ್ದು ಕೇರಳದಲ್ಲಿ ಸಿ.ಪಿ.ಐ. ಮಾರ್ಕ್ಸ್‌ವಾದಿ ವಿರೋಧಿ ರಂಗ ರೂಪಿಸಿತು ಮತ್ತು ಪ. ಬಂಗಾಳದ ಐಕ್ಯರಂಗ ಸರ್ಕಾರವನ್ನು ಉರುಳಿಸಿತು. 1972–73ರಲ್ಲಿ ಮತ್ತೆ ಒಂದು ಪ್ರಯತ್ನನಡೆದು, ಐಕ್ಯತೆ ರೂಪಿತವಾಗಿ ಅದರ ಆಧಾರದ ಮೇಲೆ ಭವ್ಯ ರೈಲ್ವೆ ಮುಷ್ಕರವನ್ನು ಹೂಡಲಾಯಿತು. ಆದರೆ ಐಟಕ್ ನಾಯಕರು ರೈಲ್ವೆ ಕಾರ್ಮಿಕರನ್ನು ಬಿಟ್ಟುಕೊಟ್ಟಾಗ ಅದು ಮುರಿಯಿತು. ನಂತರ ಸಿ.ಪಿ.ಐ. ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿ, ಸೋಷಿಯಲಿಸ್ಟರು ತಮ್ಮ ಅಸ್ತಿತ್ವವನ್ನು ಜಿ.ಪಿ. ಚಳುವಳಿಯಲ್ಲಿ ನಂತರ ಜನತಾ ಪಕ್ಷದೊಳಗೆ ಸೇರಿಸಿಕೊಂಡಾಗ ಆ ಐಕ್ಯತೆ ಮುರಿಯಿತು.

ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯ ನೀತಿಯನ್ನು ತೀವ್ರವಾಗಿ ಅನುಸರಿಸುತ್ತಿದೆ. ಇದರ ಫಲವನ್ನು ಕೇರಳದಲ್ಲಿ ಮಾರ್ಕ್ಸ್‌ವಾದಿ ವಿರೋಧಿ ರಂಗದ ಸರ್ಕಾರದ ಬದಲಿಗೆ ಬಂದಿರುವ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗದ ಸರ್ಕಾರದಲ್ಲಿ ತಮಿಳುನಾಡಿನ ಎಡ ಪಂಥವೂ ಸೇರಿದ ವಿಶಾಲ ಪ್ರಜಾಪ್ರಭುತ್ವವಾದಿ ಮೈತ್ರಿಯಲ್ಲಿ ಮತ್ತು ಎರಡು ರಾಜ್ಯಗಳಲ್ಲಿ ಸರ್ವಾಧಿಕಾರಿ ಶಕ್ತಿಗಳ ಸೋಲಿನಲ್ಲಿ ಇಂದು ಕಾಣಬಹುದು. ಲೋಕಸಭೆಯ ಕಳೆದ ಎರಡು ಚುನಾವಣೆಗಳು ಮತ್ತು ರಾಜ್ಯ ಚುನಾವಣೆಗಳಲ್ಲಿ ಸಿ.ಪಿ.ಐ ಮತ್ತು ಸಿ.ಪಿ.ಐ.(ಎಂ)ನ ಸಮೀಪ ಸಹಕಾರದಲ್ಲೂ ಇದನ್ನು ಕಾಣಬಹುದು.

ಈ ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು ಮುಂದುವರೆಸುವ ಪ್ರತಿಜ್ಞೆಯನ್ನು ಸಿ.ಪಿ.ಐ.(ಎಂ) ಕೈಗೊಂಡಿದೆ. ಏಕೆಂದರೆ ಬಂಡವಾಳಶಾಹಿ ಭೂಮಾಲೀಕ ಆಡಳಿತಕ್ಕೆ ಇರುವ ನೈಜ ಪರ್ಯಾಯ ಅದೊಂದೇ. ಭೂಪೇಶ್ ಗುಪ್ತರ ಪಕ್ಷವೂ ಈ ನಿಲುವಿಗೇ ಬಂದಿರುವುದು ನಮಗೆ ಸಂತೋಷವನ್ನುಂಟು ಮಾಡಿದೆ.

ಚೀನವು ಬೆಳೆಯುತ್ತಿರುವ ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು ಕೆಡಿಸುವುದೆಂಬ ಭೂಪೇಶ್ ಗುಪ್ತರ ಭಯ ಮತ್ತು ಭಾರತ–ಚೀನ ಸಂಬಂಧಗಳು ಸೋವಿಯೆತ್ ಜೊತೆಗಿರುವ ಸಂಬಂಧವನ್ನು ಕೆಡಿಸುವುದೆಂಬ ಭಯ, ಎರಡೂ ನಿರಾಧಾರವಾದುದು. ಭೂಪೇಶ್ ಗುಪ್ತರಿಗೆ ನಮ್ಮ ಮನವಿ ಇಷ್ಟೇ : ಭಾರತ ಮತ್ತು ಚೀನದ ಸಂಬಂಧಗಳನ್ನು ಸರಿಪಡಿಸುವುದರಲ್ಲಿ ಎಲ್ಲರೂ ಆಸಕ್ತಿ ತಳೆಯುತ್ತಿರುವಾಗ ಮತ್ತು ಆ ಬಗ್ಗೆ ಪ್ರಾರಂಭಿಕ ಹೆಜ್ಜೆಗಳನ್ನು ಇಡುತ್ತಿರುವಾಗ, ಚೀನ ವಿರೋಧಿ ಭಾವನೆಯನ್ನು ಕೆರಳಿಸುವುದನ್ನು ಅವರ ಪಕ್ಷ ನಿಲ್ಲಿಸಲಿ.

ಭಾರತದ ನೆರೆ ದೇಶಗಳೊಂದಿಗೆ, ಪಾಕಿಸ್ತಾನವು ಹುಟ್ಟಿದಂದಿನಿಂದ ದ್ವೇಷ ಇದ್ದರೂ ಅದರೊಡನೆ ಕೂಡ ಸ್ನೇಹ ಸಂಬಂಧಗಳನ್ನು ಸ್ಥಾಪಿಸಿಕೊಳ್ಳುವಂತೆ, ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) ಪಕ್ಷಗಳೆರಡರ ಕಾರ್ಯಕ್ರಮಗಳೆರಡೂ ಕರೆ ನೀಡುತ್ತವೆ. ಜುಲೈ 6ರ ನ್ಯೂಏಜ್‌ನ ಲೇಖನದಲ್ಲಿ ಮಾಡಿರುವ ಕೆಲಸಕ್ಕಿಂತ ಭೂಪೇಶ್‌ಗುಪ್ತರು ತಮ್ಮ ಪಕ್ಷದ ಈ ಕಾರ್ಯಕ್ರಮಾತ್ಮಕ ನಿಲುವನ್ನು ಸ್ವಲ್ಪ ಗಂಭೀರವಾಗಿ ತೆಗೆದುಕೊಳ್ಳುವರೆಂದು ಆಶಿಸುತ್ತೇವೆ.

○

ಕಸ್ಬಾ ಗ್ರಾಮದಲ್ಲಿ ಯುವಜನ ಸಭೆ

ತಾರೀಕು 20-7-1980ರಂದು ಕುಂದಾಪುರ ತಾಲ್ಲೂಕಿನ ಕಸ್ಬಾ ಗ್ರಾಮದ ಚರ್ಚ್‌ರೋಡ್ ವಿಭಾಗದ ಯುವಜನರ ಸಭೆಯು ಶ್ರೀಯುತ ಶಿವಾನಂದಕೋಡಿ ಇವರ ಅಧ್ಯಕ್ಷತೆಯಲ್ಲಿ ಸೇರಿತು. ಸಂಘಟನೆಯನ್ನು ವಿಸ್ತರಿಸಿ ಬೆಳೆಸಲು, ಸೂಕ್ತ ಕಾರ್ಯಕ್ರಮವನ್ನು ರೂಪಿಸಲು ನಿರ್ಧರಿಸಲಾಯಿತು. ಒಂದು ತಿಂಗಳ ಅವಧಿಯಲ್ಲಿ ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಗೆ ಹೆಚ್ಚಿನ ಸದಸ್ಯರನ್ನು ಸೇರಿಸುವ ಕಾರ್ಯಕ್ರಮ ಹಾಕಲಾಯಿತು.

ಸಭೆಯಲ್ಲಿ ಉಪಸ್ಥಿತರಿದ್ದ ಕಾಂ. ಕೆ. ಶಂಕರ್‌ರವರು ಯುವಕರನ್ನುದ್ದೇಶಿಸಿ ಮಾತನಾಡುತ್ತಾ, ಯುವಜನತೆಗೆ ವೈಜ್ಞಾನಿಕ ದೃಷ್ಟಿಕೋನವನ್ನಿತ್ತು, ವಿಚಾರಕ್ರಾಂತಿ ಮತ್ತು ಸಾಮಾಜಿಕ ಜಾಗೃತಿಗಳನ್ನುಂಟುಮಾಡಿ, ಯುವಶಕ್ತಿಯನ್ನು ರಚನಾತ್ಮಕವಾಗಿ ಬಳಸುವಂತೆ ಮಾಡುವುದು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಉದ್ದೇಶವಾಗಿದ್ದು, ಯುವಜನತೆ ಇದನ್ನು ಮನಗಂಡು, ಅರ್ಥಪೂರ್ಣ ಮಾಡುವುದಕ್ಕಾಗಿ ಹೋರಾಡಲು ಮುಂದಾಗಬೇಕೆಂದು ಹೇಳಿದರು.

ಹತ್ತುಮಂದಿ ಇರುವ ಸಮಿತಿಯೊಂದನ್ನು ಪುನರ್ ಸಂಘಟಿಸಿ, ಕೆ. ಆನಂದನವರು ಅಧ್ಯಕ್ಷರಾಗಿ ಹಾಗೂ ಎಚ್. ನರಸಿಂಹನವರು ಕಾರ್ಯದರ್ಶಿಯಾಗಿ ಆಯ್ಕೆಮಾಡಲಾಯಿತು. "ಪುಸ್ತಕ ಭಂಡಾರ"ವನ್ನು ತೆರೆಯಲು ಹಾಗೂ ಕೆಲವು ಮುಖ್ಯ ವಿಷಯಗಳ ಬಗ್ಗೆ "ವಿಚಾರಗೋಷ್ಠಿ"ಯನ್ನೇರ್ಪಡಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

●

ತ್ರಿಪುರಾಕ್ಕೆ ಸಹಾಯ

ತ್ರಿಪುರದಲ್ಲಿ ಇತ್ತೀಚೆಗೆ ನಡೆದ ಗಲಭೆಗೊಳಗಾದ ನಿರಾಶ್ರಿತರಿಗೆ ಪರಿಹಾರವನ್ನು ಸಂಗ್ರಹಿಸುವ ಸಲುವಾಗಿ ತಾ. 22-7-80ರಂದು ಎ. ಕೆ. ಜಿ. ಕ್ಲಬ್ ಮತ್ತು ಬ್ರಾಂಚ್ ಸೇರಿ ಸಭೆ ನಡೆಸಿತು. ಸಭೆಯಲ್ಲಿ ಕೊಡಗು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ. ಹೆಚ್.ಎನ್. ಗಣೇಶ್‌ನವರು ಇತ್ತೀಚೆಗೆ ನಡೆದ ಗಲಭೆಗೊಳಗಾದ ನಿರಾಶ್ರಿತರ ಬಗ್ಗೆ ಕೆಲವು ಮಾತುಗಳನ್ನಾಡಿದರು. ಪರಿಹಾರ ಸಂಗ್ರಹವನ್ನು ಮೊದಲ ಕಂತಾಗಿ 70,00ರೂಪಾಯಿಯನ್ನು ಸಂಗ್ರಹಿಸಿ ತ್ರಿಪುರಕ್ಕೆ ಕಳುಹಿಸಲಾಯಿತು. ●

ಹೋರಾಟದ ಯಶಸ್ವೀ ಮುಕ್ತಾಯ

ಒಂದು ಪುಟ್ಟ ಬೇಡಿಕೆಯನ್ನಿಟ್ಟು ಬೆಂಗಳೂರುನಗರದ ಕೋಶಿಸ್ ಹೋಟೆಲಿನ ಸುಮಾರು 100ಜನ ಕಾರ್ಮಿಕರು ಸುಮಾರು 1ತಿಂಗಳಿನಿಂದ ಹೋರಾಟ ನಡೆಸುತ್ತಿದ್ದರು. ಬೇಡಿಕೆಯನ್ನು ಈಡೇರಿಸುವ ಬದಲು ಮಾಲೀಕರು ದಿನಾಂಕ 25-6-80ರಿಂದ ಅಕ್ರಮ ಬೀಗಮುದ್ರೆ ಘೋಷಿಸಿದ್ದರು.

ಆದರೆ ಕಾರ್ಮಿಕರು ಬೀಗಮುದ್ರೆಯ ವಿರುದ್ಧ ಹೋಟೆಲ್ ಮುಂದೆ ಧರಣಿ ನಡೆಸಿ ತಮ್ಮ ಬೇಡಿಕೆಯನ್ನು ಈಡೇರಿಸುವಂತೆ ಹಠಹಿಡಿದ ಪ್ರಯುಕ್ತ ಮಾಲೀಕರು ಸುಮಾರು 1 ತಿಂಗಳಿಂದ ಹೊರಡಿಸಿದ್ದ ಬೀಗಮುದ್ರೆಯನ್ನು ಹಿಂತೆಗೆದುಕೊಳ್ಳಬೇಕಾಗಿ ಬಂತು.

1ತಿಂಗಳ ಬೀಗಮುದ್ರೆಯ ಕಾಲದಲ್ಲಿನ ಶೇ.90 ಭಾಗ ವೇತನವನ್ನು ಕಾರ್ಮಿಕರಿಗೆ ಮಾಲೀಕರು ನೀಡುವಂತೆ ಕಾರ್ಮಿಕ ಇಲಾಖೆಯಲ್ಲಿ ನಡೆದ ಒಪ್ಪಂದದಲ್ಲಿ ತೀರ್ಮಾನವಾಗಿದೆ.

ಕಾರ್ಮಿಕರು ಹರ್ಷದಿಂದ ಇದೇ ತಿಂಗಳು 23ರಿಂದ ಕೆಲಸಕ್ಕೆ ಹಾಜರಾದರೆಂದು ಸಂಘದ ಮುಖಂಡ ಕಾ. ಟಿ. ಎಸ್. ಅನಂತರಾವ್, ತಿಳಿಸಿದ್ದಾರೆ.

ಮೆಟಲ್ ಲ್ಯಾಂಪ್ ಕ್ಯಾಪ್ಸ್ ಕಾರ್ಮಿಕರ ಮೇಲೆ ಹಲ್ಲೆ ಯತ್ನ

ಶಾಂತಿಯುತ ಬೇಡಿಕೆಗಳ ಮುಷ್ಕರದಲ್ಲಿ ನಿರತರಾಗಿದ್ದ ಮೆಟಲ್ ಲ್ಯಾಂಪ್ ಕ್ಯಾಪ್ಸ್ ಕಾರ್ಮಿಕರ (ಸಿ.ಐ.ಟಿ.ಯು.) ವಿರುದ್ಧ 14-7-80ರಂದು ಗೂಂಡಾಗಳು ಹಠಾತ್ ಧಾಳಿ ನಡೆಸಲು ವಿಫಲಯತ್ನ ನಡೆಸಿದರು. ಚಾಕು, ಸೈಕಲ್ ಚೈನುಗಳನ್ನು ಕಾರಿನ ಡಿಕ್ಕಿಯಲ್ಲಿ ತುಂಬಿಸಿಕೊಂಡು ಬಂದಿದ್ದ ಗೂಂಡಾಗಳು, ಕಾರ್ಮಿಕರ ಮುಂಜಾಗ್ರತೆಯನ್ನು ಗಮನಿಸಿ ಪರಾರಿಯಾದರು.

ಕಾರ್ಮಿಕರಿಗೆ ಲೇ ಆಫ್ ಸಂಬಳವನ್ನು ಕೊಡಲು ನಿರಾಕರಿಸಿರುವ ಆಡಳಿತ ವರ್ಗದ ವಿರುದ್ಧ ಹೂಡಿರುವ ಈ ಮುಷ್ಕರ ಎಪ್ಪತ್ತು ದಿನಗಳಿಗೆ ಮುಟ್ಟಿದೆ. ಸಂಘದ ಪದಾಧಿಕಾರಿಗಳೂ ಸೇರಿ ಐವತ್ತು ಕಾರ್ಮಿಕರನ್ನು ವಜಾ ಮಾಡಿರುವುದು ಈ ಮುಷ್ಕರಕ್ಕೆ ಕಾರಣವಾಗಿದೆ.

1978ರಲ್ಲಿ ಈ ಕಾರ್ಮಿಕರು ಚಾರಿತ್ರಿಕ ಹೋರಾಟ ನಡೆಸಿದ್ದರು. ಬೆಂಗಳೂರಿನ ಸಮುದಾಯ ತಂಡದವರು ಈ ಕಾರ್ಮಿಕರಿಂದ 'ಹೋರಾಟ' ಎಂಬ ನಾಟಕವನ್ನು ಬೆಂಗಳೂರಿನ ಮೂಲೆಮೂಲೆಯಲ್ಲಿ ಆಡಿಸಿದ್ದರು. ಕಾಂ. ಇ. ಎಂ. ಎಸ್. ಮತ್ತು ಪಿ. ರಾಮಮೂರ್ತಿ ಅವರು ಈ ಹೋರಾಟವನ್ನು ಬೆಂಬಲಿಸಿ ಬಹಿರಂಗ ಸಭೆ ನಡೆಸಿದ್ದರು.

ಬೆಂಗಳೂರಿನ ಆಲಸೂರು ಕೆರೆ ದಡದಲ್ಲಿರುವ ಈ ಕಾರ್ಖಾನೆ ಇಂಗ್ಲೆಂಡಿನ ಥೊರ್ನ್ ಎಲೆಕ್ಟ್ರಿಕಲ್ಸ್ ಎಂಬ ಗುತ್ತೇದಾರಿಗೆ ಸೇರಿದೆ. 300 ಕಾರ್ಮಿಕರು ಅದರಲ್ಲಿ ದುಡಿಯುತ್ತಿದ್ದಾರೆ. ಸಿ. ಐ. ಟಿ. ಯು. ಇಲ್ಲಿ ಸಂಘಟನೆ ನಡೆಸುವುದಕ್ಕೆ ಮುನ್ನ ಹಲವು ಹೋರಾಟಗಳನ್ನು ಆಡಳಿತ ವರ್ಗ ದಮನಮಾಡಿತ್ತು. ಆದರೆ ಸಿ. ಐ. ಟಿ. ಯು ವಿನ ಬಲ ಕಂಡು ಈ ಸಂಘಕ್ಕೆ ಮಾನ್ಯತೆ ನೀಡಲಾಗಿದೆ. ಕಾರ್ಖಾನೆಯ ಸುತ್ತ 35ನೇ ಸೆಕ್ಷನ್ ಜಾರಿಮಾಡಲಾಗಿದ್ದು ಕಾರ್ಮಿಕರ ಶಾಂತಿಯುತ ಮುಷ್ಕರವನ್ನು ಪೋಲೀಸರು ತೊಂದರೆಗೊಳಿಸುತ್ತಿದ್ದಾರೆ. ಆದರೆ ಆಡಳಿತವರ್ಗದ ಗೂಂಡಾಗಳು ಕಾರಿನಲ್ಲಿ ಮಾರಕಾಸ್ತ್ರಗಳನ್ನು ಇಟ್ಟುಕೊಂಡು ತಿರುಗಲು ಪೋಲೀಸರು ಅವಕಾಶ ನೀಡಿದ್ದಾರೆ. ○

ರಾಜ್ಯ ಸರಕಾರಿ ನೌಕರರ ಯಶಸ್ವಿ ಮುಷ್ಕರ

ದೀರ್ಘಕಾಲದ ತಮ್ಮ 25 ಅಂಶಗಳ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸಲು ಸುಮಾರು 1.4 ಲಕ್ಷ ರಾಜ್ಯಸರಕಾರಿ ನಾಲ್ಕನೆ ದರ್ಜೆ ನೌಕರರು ಜುಲೈ 3 ಮತ್ತು 4ರಂದು ಮುಷ್ಕರವನ್ನು ನಡೆಸಿದರು. ರಾಜ್ಯದ ಚರಿತ್ರೆಯಲ್ಲಿ ಪ್ರಥಮ ಭಾರಿಗೆ ನಡೆಸಿದ ಸರಕಾರದ ಕೆಳದರ್ಜೆ ನೌಕರರ ಈ ಹೋರಾಟವು ಅತ್ಯಂತ ಯಶಸ್ವಿಯಾಗಿತ್ತು. ರಾಜ್ಯದ ರಾಜಧಾನಿ ಬೆಂಗಳೂರಿನ ಎಲ್ಲಾ ಕಛೇರಿಗಳು, ಆಸ್ಪತ್ರೆಗಳು ಹಾಗೂ ವಿಧಾನಸೌಧದ ನಾಲ್ಕನೆ ದರ್ಜೆ ನೌಕರರು ತಮ್ಮ ಕೆಲಸಗಳಿಗೆ ಗೈರುಹಾಜರಾಗಿ ಸಂಘದ ಅಧ್ಯಕ್ಷ ಜೆ. ರಾಮ್‌ಸಿಂಗ್‌ರವರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಕಬ್ಬನ್ ಪಾರ್ಕಿನಲ್ಲಿ ಬಂದು ಸೇರಿದರು. ವಿಧಾನಸೌಧದ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಜೆ. ರಾಮ್‌ಸಿಂಗ್ ಸಹಿತವಾಗಿ ಸಂಘದ ಪ್ರಮುಖ ಕಾರ್ಯಕರ್ತರುಗಳನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆಗೊಳಿಸಿದರು.

ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿ ಎಂ. ಸಿದ್ದಪ್ಪ, ಡಿ. ಬಿಳಿಗಿರಯ್ಯ, ರಾಮಮೂರ್ತಿ, ನಂಜುಂಡಯ್ಯ ಮೊದಲಾದವರು ಮಾತನಾಡಿದರು.

ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ, ನೌಕರರ ಪ್ರತಿನಿಧಿಗಳಿಗೆ, ಆರ್ಥಿಕ ಮಂತ್ರಿ ಶ್ರೀ ವೀರಪ್ಪ ಮೊಯ್ಲಿಯವರು ಆಶ್ವಾಸನೆಯಿತ್ತುದರಿಂದ ತಾ. 5ರಿಂದ ಮುಷ್ಕರವನ್ನು ನಿಲ್ಲಿಸಲಾಯಿತು. ●

ಆಧುನಿಕ ರಾಜಕೀಯ ಬೆಳವಣಿಗೆಯಲ್ಲಿ ಜಾತಿ, ವರ್ಗ ಮತ್ತು ಪಕ್ಷಗಳು

(ಹಿಂದಿನ ಸಂಚಿಕೆಯಿಂದ)

ಕಾರ್ಯಕ್ರಮದಲ್ಲಿ ಮೀಸಲಾತಿ :

ತಿರುವಾಂಕೂರು ಮತ್ತು ಕೊಚಿನ್‌ನಲ್ಲಿ ಆಧುನಿಕ ರಾಜಕೀಯ ಚಳುವಳಿಯು ಈ ಸ್ವರೂಪವನ್ನು ಪಡೆದ ಮೇಲೆ ತುಂಬಾ ಮುಖ್ಯವೆನಿಸಿದ ಪ್ರಶ್ನೆ ಎಂದರೆ, ಈ ಆಧುನಿಕ ಪ್ರಜಾಪ್ರಭುತ್ವವಾದಿ ರಾಜಕೀಯ ಚಳುವಳಿ ವ್ಯವಸ್ಥೆ ಬಂದರೆ ಹಿಂದೂಗಳಲ್ಲದ ಮತ್ತು ಮೇಲ್ಜಾತಿ ಹಿಂದೂಗಳಲ್ಲದವರು ಯಾವ ಸ್ಥಾನವನ್ನು ಪಡೆಯುತ್ತಾರೆ ಎಂಬುದು ಹಿಂದುಳಿದ ಕೋಮಿನವರಿಗೆ ಸರ್ಕಾರಿ ನೌಕರಿಯನ್ನು ಮೀಸಲಿಡುವುದು ತುಂಬಾ ವಿವಾದಾಸ್ಪದವಾದ ವಿಚಾರವಾಯಿತು. ಹಿಂದುಳಿದ ಜನಾಂಗದವರೆಲ್ಲರೂ ಸಾರ್ವತ್ರಿಕವಾಗಿ ಈ ಬೇಡಿಕೆಯನ್ನು ಮುಂದಿಟ್ಟರು. ರಾಜ್ಯದಲ್ಲಿ ಈಗ ತಾನೇ ರೂಪುಗೊಳ್ಳುತ್ತಿದ್ದ ವಿಚಾರವಾದಿ ಶಕ್ತಿಗಳು ಇದನ್ನು ಪೂರ್ತಿಯಾಗಿ ಬೆಂಬಲಿಸಿದರು. ಆದರೆ ಮುಂದುವರೆದ ಜಾತಿಗಳ ನಾಯಕರು ಇಂತಹ ಬೇಡಿಕೆಗಳನ್ನು ವಿರೋಧಿಸಲು ಆಧುನಿಕ ಜಾತ್ಯತೀತ ರಾಷ್ಟ್ರೀಯತೆಯ ನೆವವನ್ನು ಹುಡುಕಿದರು. ಮುಂದುವರೆದ ಜಾತಿಗಳಿಗೆ ಸೇರಿದ ಅನೇಕ ನಿಜವಾದ ರಾಷ್ಟ್ರೀಯ ನಾಯಕರು, ದಿವಾನರ ನಿರಂಕುಶ ಪ್ರಭುತ್ವದ ವಿರುದ್ಧ ರಾಜಕೀಯ ಚಳುವಳಿಯನ್ನು ಬೆಳಸಲು ಹಿಂದುಳಿದ ಜನಾಂಗದ ಈ ಬೇಡಿಕೆಗಳನ್ನು ಗಮನಿಸಬೇಕಾದ ಅಗತ್ಯವನ್ನು ಮನಗಂಡರು.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಪ್ರತಿರೂಪಗಳಾದ ತಿರುವಾಂಕೂರು ರಾಜ್ಯಕಾಂಗ್ರೆಸ್, ಕೊಚ್ಚಿನ್ ಕಾಂಗ್ರೆಸ್, ಪ್ರಜಾಮಂಡಲಿ–ಇವು ತಿರುವಾಂಕೂರು ಮತ್ತು ಕೊಚ್ಚಿನ್‌ಗಳಲ್ಲಿ ಈ ಬೇಡಿಕೆಯನ್ನು ತಮ್ಮ ನೀತಿ ದಾಖಲೆಗಳಲ್ಲಿ ಸೇರಿಸಿಕೊಂಡದ್ದು ಈ ರಾಜ್ಯದ ಆಧುನಿಕ ರಾಜಕೀಯ ಚಳುವಳಿಯ ಚರಿತ್ರೆಯಲ್ಲಿ ಒಂದು ಪ್ರಮುಖ ತಿರುವಾಗಿದೆ. ಇದರಿಂದ ಸ್ಪಷ್ಟವಾಗುವ ವಿಚಾರವೆಂದರೆ, ಜಾತಿ ಅಂಶವು ಸಮಾಜದ ಸಾಮಾಜಿಕ ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖವಾಗುತ್ತಿದ್ದರೂ ಬಹಳ ಕಾಲದವರೆಗೆ ಅದು ರಾಜಕೀಯ ಜೀವನದಲ್ಲಿ ಮುಖ್ಯವಾದ ಪಾತ್ರವನ್ನೇ ವಹಿಸುತ್ತದೆ.

"ಜಾತಿ ಅಥವಾ ಆರ್ಥಿಕ ಸಂಪತ್ತು" ಮೀಸಲಾತಿಯ ಆಧಾರವಾದಿರುವುದರ ಬಗ್ಗೆ ಸದ್ಯದಲ್ಲಿ ಇರುವ ವಿವಾದದ ಮೂಲ ಇದೇ ಎಂಬುದು ಈಗ ಸೂಚಿತವಾಗುತ್ತದೆ. ಈ ವಿಚಾರಕ್ಕೆ ಪ್ರವೇಶಿಸುವುದಕ್ಕೆ ಮುಂಚೆ, ಇಲ್ಲಿ ಹೇಳಬೇಕಾದ ಅಗತ್ಯವಾದ ಅಂಶವೆಂದರೆ, ಕೊಚ್ಚಿನ್ ಮತ್ತು ತಿರುವಾಂಕೂರು ರಾಜ್ಯಗಳಿಗೆ ಆಧುನಿಕ ರಾಜಕೀಯ ಚಳುವಳಿ ಹರಡುವ ವೇಳೆಗೆ, ರಾಜಕೀಯ ನಾಯಕತ್ವದ ಕ್ಷೇತ್ರದಲ್ಲಿ ಬೂರ್ಜ್ವಾಗಳ ಏಕಸ್ವಾಮ್ಯ ಕೊನೆಗೊಳ್ಳುವ ಸ್ಥಿತಿ ಬಂದಿತ್ತು. ಕಾರ್ಮಿಕ ವರ್ಗ ಪ್ರಮುಖ ರಾಜಕೀಯ ಶಕ್ತಿಯಾಗಿತ್ತು. ಇದು ಟ್ರೇಡ್‌ಯೂನಿಯನ್ ಮುಂತಾದ ತನ್ನದೇ ಸಾಮೂಹಿಕ ಸಂಘಟನೆಗಳನ್ನು ಕಟ್ಟಿಕೊಂಡು, ತನ್ನದೇ ಆದ ವಿಶಿಷ್ಟ ರೂಪದ ಕ್ರಿಯೆಯಾದ ಆರ್ಥಿಕ ಮತ್ತು ರಾಜಕೀಯ ಮುಷ್ಕರಗಳನ್ನು ನಡೆಸುತ್ತಿದ್ದಷ್ಟೇ ಅಲ್ಲದೆ ತನ್ನದೇ ಆದ ರಾಜಕೀಯ ಪಕ್ಷಕ್ಕೂ ಜನ್ಮ ಕೊಟ್ಟಿತ್ತು.

1934ರಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷವು ಸ್ಥಾಪನೆಯಾಗಿ, ಇದರ ನಾಯಕರು ಭಾರತದ ಕಮ್ಯುನಿಸ್ಟ್ ಪಕ್ಷದ ನಾಯಕರೊಡನೆ ಸ್ಥಾಪಿಸಿಕೊಂಡ ಸಂಬಂಧಗಳು ಕೇರಳದ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷವು ನಿಧಾನವಾಗಿ ಕಮ್ಯುನಿಸ್ಟ್ ಪಕ್ಷಕ್ಕೆ ಪರಿವರ್ತನೆಯಾದದ್ದು ಇವೆಲ್ಲವೂ ಮತ್ತು ಇದರ ಜೊತೆಗೆ ಮಲಬಾರ್‌ನ ಕೆ.ಪಿ.ಸಿ.ಸಿ. ಮತ್ತು ತಿರುವಾಂಕೂರು ರಾಜ್ಯಕಾಂಗ್ರೆಸ್, ಕೊಚ್ಚಿನ್ ಕಾಂಗ್ರೆಸ್ ಪಕ್ಷದಲ್ಲಿದ್ದ ಕಾಂಗ್ರೆಸ್ ಸೋಷಿಯಲಿಸ್ಟ್–ಕಮ್ಯುನಿಸ್ಟ್ ಕಾರ್ಯಕರ್ತರು ಸಕ್ರಿಯವಾಗಿ ವಹಿಸಿದ ಪಾತ್ರ ಇವೆಲ್ಲವೂ ದೊಡ್ಡ ತಿರುವೇ ಆಗಿದೆ. ಇಲ್ಲಿ ಕಾಣುವ ವಾಸ್ತವ ಸ್ಥಿತಿಯೆಂದರೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷ ಈ ಎರಡು ರಾಜ್ಯಗಳಲ್ಲಿನ ಅದರ ಸೋದರ ಸಂಸ್ಥೆಗಳ ಬಲಪಂಥೀಯ ಭೂರ್ಜ್ವಾ ನಾಯಕತ್ವದಿಂದ ಸ್ವತಂತ್ರವಾದ ರಾಜಕೀಯ ಶಕ್ತಿಯೊಂದು ಬೆಳೆಯುತ್ತಿದ್ದು, ಅದು ನೇರವಾಗಿ ಹಿಂಜರಿಯದೆ ತಾನು ಕಾರ್ಮಿಕ ವರ್ಗದ ಪಕ್ಷವೆಂದು ಘೋಷಿಸಿಕೊಂಡಿತು. 1938ರಲ್ಲಿ ತಿರುವಾಂಕೂರು ರಾಜ್ಯಕಾಂಗ್ರೆಸ್ ಹೋರಾಟದಲ್ಲಿ ಕಾರ್ಮಿಕವರ್ಗ ವಹಿಸಿದ ಪಾತ್ರವು ಜಾತ್ಯತೀತ ಆಧುನಿಕ ಪ್ರಜಾಸತ್ತಾತ್ಮಕ ರಾಜಕೀಯ ಚಳುವಳಿಯಿಂದ ಬೇರೆಯಾದ ಮತ್ತು ಕೊಚ್ಚಿನ್ ಮಲಬಾರ್‌ಗಳ ಅಂಥದೇ ಹೋರಾಟಗಳಲ್ಲಿ ಕಾರ್ಮಿಕ ವರ್ಗ ವಹಿಸಿದ ಪಾತ್ರ ಹೊಸ ರಾಜಕೀಯ ಪಕ್ಷದ ಉಗಮವನ್ನು ಪ್ರಕಟಿಸಿತು. ಈ ನಾಲ್ಕು ದಶಕಗಳು ಆಧುನಿಕ ರಾಜಕೀಯ ಚಳುವಳಿಯಲ್ಲಿ ಬಲಪಂಥ ಮತ್ತು ಎಡಪಂಥಗಳ ನಡುವೆ, ಬೂರ್ಜ್ವಾ ಮತ್ತು ಕಾರ್ಮಿಕರ ಧೋರಣೆಗಳ ನಡುವೆ ಕೊನೆಯಿಲ್ಲದ ಹೋರಾಟ ನಡೆದಿದೆ. ಆಧುನಿಕ ರಾಜಕೀಯ ಚಳುವಳಿಯಲ್ಲಿ ಬೂರ್ಜ್ವಾ ಮತ್ತು ಕಾರ್ಮಿಕ ವರ್ಗಗಳ ಧೋರಣೆಗಳು ಹುಟ್ಟಿದ್ದರಿಂದ ಜಾತಿ–ಉಪಜಾತಿ ಮತ್ತು ಧಾರ್ಮಿಕ ಕೋಮುಗಳ ಅಂಶವೇನೂ ಸ್ತುತವಾದ ವಿಚಾರಗಳಾಗಲಿಲ್ಲ. ಅಷ್ಟೇ ಏನು, ಈಗಲೂ ಕೂಡ ಅದು ಪ್ರಮುಖವಾದ ಪಾತ್ರ ವಹಿಸುತ್ತಿದೆ. ಕುಮಾರ ಪಿಳ್ಳೆ ಮತ್ತು ನೆಟ್ಟೂರು ದಾಮೋದರನ್ ಸಮಿತಿ ವರದಿಗಳಲ್ಲಿ ಸೂಚಿತವಾದ ಹಿಂದುಳಿದ ಕೋಮುಗಳ ಮೀಸಲಾತಿಯ ಬಗ್ಗೆ ಇಂದಿಗೂ ತೀವ್ರವಾದ ವಾದವಿವಾದಗಳು ಇರುವುದರ ಮೂಲಕ ಈ ಅಂಶ ಸ್ಪಷ್ಟವಾಗಿ ಗೋಚರವಾಗುತ್ತದೆ.

ಈ ಎರಡೂ ವರದಿಗಳಲ್ಲಿರುವ ಸಮಸ್ಯೆಗಳು ಒಂದಕ್ಕೊಂದಕ್ಕೆ ಸಂಬಂಧಿಸಿದಂತೆ ಇರುವುದಾದರೂ, ಎರಡೂ ಬೇರೆಬೇರೆಯೇ. ಕುಮಾರಪಿಳ್ಳೆ ಸಮಿತಿಯು ವಿದ್ಯಾಭ್ಯಾಸಕ್ಕೆ ಕೊಡುವ ರಿಯಾಯಿತಿಗಳನ್ನು ಎಂದರೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಮೀಸಲು ಸ್ಥಾನವನ್ನಿಡುವುದು, ಮತ್ತು ಹಣಕಾಸು ಅನುಕೂಲಗಳು, ಶುಲ್ಕ ವಿನಾಯಿತಿ, ಸ್ಟೈಫೆಂಡ್, ಪುಸ್ತಕ ಇತ್ಯಾದಿಗಳನ್ನು ಕೊಡುವುದು – ಇವುಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಅಧ್ಯಯನ ಮಾಡಿತ್ತು. ನೆಟ್ಟೂರು ಸಮಿತಿಯು ಸರ್ಕಾರಿ ನೌಕರಿಯಲ್ಲಿ ಮೀಸಲು ಸ್ಥಾನವನ್ನು ಕಾಯ್ದಿರಿಸುವುದನ್ನು ಕುರಿತದಾಗಿತ್ತು.

ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶ ಮತ್ತು ಸರ್ಕಾರಿ ನೌಕರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಮೀಸಲು ಸ್ಥಾನಗಳು ಇವೆರಡೂ ಒಂದೇ ಗುಂಪಿಗೆ ಸೇರಿರುವಂತಹುದು. ಏಕೆಂದರೆ ಇದಕ್ಕೆ ಸಂಬಂಧಿಸಿದಂತೆ 'ಹಿಂದುಳಿದ' ಜನಾಂಗಗಳಿಗೆ ಕೊಡುವ ಯಾವುದೇ ರಿಯಾಯಿತಿಯೂ ಕೂಡ 'ಮುಂದುವರೆದ' ಜನಾಂಗಗಳಿಗೆ ಕಡಿಮೆ ಮಾಡಿಕೊಡುವಂತಹುದು ಅನಿವಾರ್ಯವಾಗಿತ್ತು. ಆದ್ದರಿಂದ ಈ ಮುಂದುವರೆದ ಜನಾಂಗಗಳು ತಾವು ಇಂತಹ ನಿರ್ದಿಷ್ಟ ಜಾತಿಯಲ್ಲಿ ಹುಟ್ಟಿದ್ದನ್ನು ಬಿಟ್ಟರೆ ಮತ್ತೆ ಯಾವ 'ತಪ್ಪು' ಇಲ್ಲದೆ ಕೆಲವು ಅವಕಾಶಗಳಿಂದ ತಾವು ವಂಚಿತರಾಗುತ್ತಿರುವ ದಾರಿ ಅವರು ದೂರಿದರು!

ಹಣಕಾಸು ರಿಯಾಯಿತಿಗಳ ವಿಚಾರದಲ್ಲಿ 'ಹಿಂದುಳಿದ' ಜನಾಂಗಗಳಿಗೆ ಕೊಟ್ಟ ರಿಯಾಯಿತಿಗಳನ್ನು 'ಮುಂದುವರೆದ' ಜನಾಂಗಕ್ಕೂ ಕೊಡಬಹುದು. ಸರ್ಕಾರಕ್ಕೆ ಈ ಎರಡೂ ವರ್ಗಕ್ಕೆ ವಿದ್ಯಾಭ್ಯಾಸಕ್ಕೆ ಹಣ ಒದಗಿಸುವುದಕ್ಕೆ ಸಾಕಷ್ಟು ಸಂಪನ್ಮೂಲಗಳು ಇದ್ದಾಗ ಮಾತ್ರ ಸಾಧ್ಯ. ಸರ್ಕಾರಕ್ಕೆ ಹೀಗೆ ಮಾಡಲು ಸಾಧ್ಯವಾದ್ದರಿಂದ ಈ ದೂರುಗಳಿಗೆ ಪರಿಹಾರ ಸಿಕ್ಕಿತು.

(ಮುಂದುವರೆಯುವುದು)

ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ಶಿವಮೊಗ್ಗ ಜಿಲ್ಲಾ ಸಮಿತಿ ಕರೆ

ತಾ. 13-7-80ನೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಸಭೆ ಸೇರಿತು. ಕಾರ್ಯದರ್ಶಿ ಕಾಂ. ಚಂದುಕುಟ್ಟಿಯವರು ಪಾರ್ಟಿಯ ಚಟುವಟಿಕೆಗಳ ಬಗ್ಗೆ ವರದಿ ಮಾಡಿ, ವರದಿಯ ಮೇಲೆ ಚರ್ಚೆಯಾದ ನಂತರ ಕೆಳಗಿನ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

1. ಸರ್ಕಾರದ ಬಂಡವಾಳಶಾಹಿ ಧೋರಣೆಯಿಂದ ನಿತ್ಯೋಪಯೋಗಿ ಸಾಮಾನುಗಳ ಬೆಲೆ ದಿನೇದಿನೇ ಏರುತ್ತಿರುವುದರ ವಿರುದ್ಧ ಸಂಘಟಿತ ಹೋರಾಟ ನಡೆಸಲು ನಗರದ ನಾಗರೀಕ ಸಮಿತಿಯೊಂದಿಗೆ ಸಹಕರಿಸಲು ಸಭೆ ನಿರ್ಧರಿಸಿತು.

2. ಸರ್ಕಾರ ಮತ್ತು ಖಾಸಗಿ ಸಾರಿಗೆ ಸಂಸ್ಥೆಗಳು ಬಸ್‌ದರ ಏರಿಸಿರುವುದನ್ನು ಸಭೆಯು ಖಂಡಿಸಿತು. ಏರಿಸಿರುವ ದರವನ್ನು ಇಳಿಸಬೇಕೆಂದು ಸಭೆಯು ಸರ್ಕಾರವನ್ನೂ, ಖಾಸಗಿ ಮಾಲೀಕರನ್ನು ಒತ್ತಾಯಪಡಿಸಿತು. ಕಳೆದ 15 ತಿಂಗಳೊಳಗೆ ಸರ್ಕಾರ ಬಸ್‌ದರ ಶೇಕಡಾ 30 ಏರಿಸಿದರೆ ಖಾಸಗಿ ಸಂಸ್ಥೆಗಳು ಶೇಕಡಾ 66.6 ಏರಿಸಿದೆ. 15 ತಿಂಗಳ ಹಿಂದೆ ತೀರ್ಥಹಳ್ಳಿಗೆ ರೂ. 3-00 ಆದರೆ ಈಗ ರೂ. 5-00ಕ್ಕೆ ಏರಿಸಿದೆ. ಇದು ಅಕ್ರಮ ಎಂದು ಖಂಡಿಸಲಾಯ್ತು.

3. ಹೊಸನಗರ ತಾಲ್ಲೂಕಿನಲ್ಲಿ ವರಾಹಿ, ಚಕ್ರ ಯೋಜನೆಯಿಂದ ಮನೆ, ಜಮೀನು ಮುಳುಗಡೆಯಾದವರಿಗೆ ಇನ್ನು ಸರಿಯಾದ ಪರಿಹಾರ ದೊರಕಿಸಿಕೊಡದೆ ಇರುವ ಸರ್ಕಾರದ ನೀತಿಯನ್ನು ಖಂಡಿಸಿದ ಸಭೆಯು ಮುಳುಗಡೆಯಿಂದ ನೊಂದವರಿಗೆ ಕೂಡಲೇ ಪರಿಹಾರ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿತು.

●

ಆರ್ಥಿಕ ಸಮೀಕ್ಷೆ :

(3ನೇ ಪುಟದಿಂದ)

ಕೃಷಿಕಾರ್ಮಿಕರ ಕುಟುಂಬಗಳ ಸರಾಸರಿ ವಾರ್ಷಿಕ ಆದಾಯವು ಬಡತನರೇಖೆಯ ಆದಾಯಕ್ಕಿಂತ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿಯೇ ಇರುವುದು. ಕಾರಣ : 1. ಇತರ ರಾಜ್ಯಗಳಿಗಿಂತ ಸರ್ವಸಾಮಾನ್ಯವಾಗಿ ಪ. ಬಂಗಾಳದಲ್ಲಿ ಜೀವನವೆಚ್ಚ ಹೆಚ್ಚಾಗಿರುವುದು. ಇಲ್ಲಿನ ಕೃಷಿಕಾರ್ಮಿಕರ ಗ್ರಾಹಕ ಬೆಲೆಸೂಚಿಯು ಈಗ 379 ಆಗಿದೆ, ಪಂಜಾಬ್‌ನಲ್ಲಿ 354 ಆಗಿದೆ. 2. ಇಲ್ಲಿನ ಕೃಷಿಕಾರ್ಮಿಕರ ಕುಟುಂಬಗಳಲ್ಲಿ ಹೆಂಗಸರ ಮತ್ತು ಮಕ್ಕಳ ಸಂಖ್ಯೆ ಕಡಿಮೆ. ಹೀಗಾಗಿ ಸರಾಸರಿ ಕುಟುಂಬದ ಆದಾಯ ಕಡಿಮೆ.

ಅಜ್ಞಾನ, ಅಸಂಘಟನೆ :

1969ರ ರಾಷ್ಟ್ರೀಯ ಕಾರ್ಮಿಕ ಆಯೋಗದ (NLC) ವರದಿಯಂತೆ, ಅದುವರೆಗೂ ಕನಿಷ್ಟ ವೇತನ ಕಾನೂನು ಬರೆದ ಕಾಗದದಲ್ಲಿಯೇ ಉಳಿದಿತ್ತು. ಅದನ್ನು ಜಾರಿಗೊಳಿಸಲು ಗಂಭೀರ ಪ್ರಯತ್ನಗಳೇ ನಡೆಯಲಿಲ್ಲ. 1974-75ರ ಗ್ರಾಮೀಣ ಕಾರ್ಮಿಕರ ವಿಚಾರಣಾ ಆಯೋಗದ ವರದಿಯಂತೆ 1. ಕೇವಲ ಶೇ. 1ರಷ್ಟು ಕೃಷಿ ಕಾರ್ಮಿಕರಷ್ಟೇ ಸಂಘಟಿತರಾಗಿರುವುದು. 2. ಶೇ. 2ರಷ್ಟು ಕೃಷಿ ಕಾರ್ಮಿಕರಷ್ಟೇ ಕನಿಷ್ಟ ವೇತನದ ಶಾಸನದ ಕುರಿತು ತಿಳುವಳಿಕೆ ಉಳ್ಳವರು. 3. 1964-65 ರಿಂದ 1974-75ರ ಅವಧಿಯಲ್ಲಿ ಕೃಷಿ ಕಾರ್ಮಿಕರಿಗೆ ಸಿಗುವ ವಾರ್ಷಿಕ ಕೆಲಸದ ದಿನಗಳು ಗಣನೀಯವಾಗಿ ಕಡಿಮೆಯಾಗಿವೆ. ಗಂಡಸರಿಗೆ, 272 ದಿನಗಳಿಂದ 246 ದಿನಗಳಿಗಿಳಿದಿದೆ; ಹೆಂಗಸರಿಗೆ ಮತ್ತು ಮಕ್ಕಳಿಗೆ 280 ದಿನಗಳಿಂದ 254 ದಿನಗಳಿಗಿಳಿದಿದೆ.

ಮೇಲಿನ ಅಧ್ಯಯನವು 1964-65ರ ಗ್ರಾಮೀಣ ಕಾರ್ಮಿಕರ ವಿಚಾರಣಾ ಆಯೋಗದ ವರದಿಯ ಆಧಾರದಲ್ಲಿರುವುದರಿಂದ, 1974-75ರ ವರದಿಯ ಆಧಾರದಲ್ಲಿ ಭಾರತದ ಕೃಷಿಕಾರ್ಮಿಕರ ಜೀವನಮಟ್ಟವು ಇನ್ನಷ್ಟು ಹದಗೆಟ್ಟಿದೆ, ಇನ್ನಷ್ಟು ಕೃಷಿಕಾರ್ಮಿಕರು ಬಡತನರೇಖೆಗಿಂತ ಕೆಳಗೆ ದೂಡಲ್ಪಟ್ಟಿದ್ದಾರೆ.

ಬಂಡವಾಳಶಾಹಿ-ಭೂಮಾಲಕ ಪದ್ಧತಿಯಲ್ಲಿ ಗ್ರಾಮೀಣ ಕೃಷಿಕಾರ್ಮಿಕರೂ ನಗರಗಳಲ್ಲಿನ ಕೈಗಾರಿಕಾ ಕಾರ್ಮಿಕರೂ ಜೀವನಾವಶ್ಯಕ ವೇತನ ಕನಿಷ್ಟ ವೇತನ ಪಡೆಯದೆ, ಹಣದುಬ್ಬರ ಬೆಲೆಏರಿಕೆಯಿಂದಾಗಿ, ನಿರುದ್ಯೋಗ ಬಡತನಗಳಿಂದಾಗಿ, ಇನ್ನಷ್ಟು ನಿರ್ಗತಿಕರಾಗುತ್ತಿದ್ದಾರೆ. 'ಹಸಿರು ಕ್ರಾಂತಿಯ' ಮತ್ತು 'ಕೈಗಾರಿಕಾಕರಣ'ದ ಪ್ರತಿಫಲ ಕಾರ್ಮಿಕರಿಗೆ ಸೇರದೆ, ಭೂಮಾಲಕರ ಮತ್ತು ಬಂಡವಾಳಶಾಹಿಗಳ ಬೊಕ್ಕಸಕ್ಕೆ ಸೇರಿರುವುದನ್ನು ಗಮನಿಸಬೇಕು.

(ಸಾಧಾರ : ಇಕಾನೊಮಿಕ್ & ಪೊಲಿಟಿಕಲ್ ವೀಕ್ಲಿ, ಮುಂಬಯಿ 14-21 ಜೂನ್, 1980)

○

ಉತ್ತರ ಕರ್ನಾಟಕದಲ್ಲಿ ಪೋಲೀಸರಿಂದ ನರಮೇಧ

(1ನೇ ಪುಟದಿಂದ)

ವುದರೊಂದಿಗೆ ಬೆಲೆ ಏರಿಕೆ ವಿರುದ್ಧ ಜನತೆ ಸಿಡಿದೆಷ್ಟು ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ರಾಜ್ಯವ್ಯಾಪ್ತಿಯಾಗುತ್ತಲಿದೆ. ನರಗುಂದ, ನರೇಗಲ್, ಮುದ್ದೇಬಿಹಾಳ, ಕೊಪ್ಪಳ, ಗಂಗಾವತಿ (ಧಾರವಾಡ, ಬಿಜಾಪುರ, ರಾಯಚೂರು ಜಿಲ್ಲೆಗಳಲ್ಲಿ) ಮೊದಲಾದೆಡೆಗಳಲ್ಲಿ ಗೋಲಿಬಾರಿನಲ್ಲಿ ಅನೇಕರು ಸಾವನ್ನಪ್ಪಿರುವರು, ರಾಜ್ಯದಲ್ಲಿ ಸಧ್ಯ ನಡೆಯುತ್ತಿರುವ ಮತ್ತು ಇನ್ನೂ ವ್ಯಾಪಕಗೊಳ್ಳುವ ಸಾಧ್ಯತೆಗಳಿರುವ ಚಳುವಳಿಯಲ್ಲಿ ರೈತರ ಚಳುವಳಿ ಮತ್ತು ಬೆಲೆಏರಿಕೆ ವಿರುದ್ಧ ಎರಡಂಶವನ್ನು ಕಾಣಬಹುದು. ಪೋಲೀಸ್ ದೌರ್ಜನ್ಯವು ಮಿತಿಮೀರಿದೆ ಎಂಬುದಂತೂ ಸ್ಪಷ್ಟ, ಅಧಿಕಾರಿಗಳ ಔದಾಸೀನ್ಯ, ಭ್ರಷ್ಟಾಚಾರ, ಪಕ್ಷಪಾತ ಧೋರಣೆ, ಸರಕಾರದ ವಿಫಲತೆ-ಎಲ್ಲವೂ ಜನತೆಯನ್ನು ಕಂಗೆಡಿಸಿದೆ.

ರಾಜ್ಯದಾದ್ಯಂತ ವ್ಯಾಪಕವಾಗುವ ಮತ್ತು ಮುನ್ನಡೆಯುತ್ತಿರುವ ಚಳುವಳಿಗೆ ಎಲ್ಲಾ ವಿರೋಧ ಪಕ್ಷಗಳೂ ಒಂದಾಗಿ ನೇತೃತ್ವ ಕೊಡುವುದು ಕಂಡು ಬಂದಿದೆ. ಗುಲ್ಬರ್ಗ, ರಾಯಚೂರು, ಬಿಜಾಪುರ, ಬೆಳಗಾವಿ, ತುಮಕೂರು, ಕೋಲಾರ, ಶಿವಮೊಗ್ಗ, ಬೆಂಗಳೂರು, ಮಂಗಳೂರು-ಈ ಎಲ್ಲಾ ಜಿಲ್ಲೆಗಳಿಂದ ಬಂದ ವರದಿಯ ಪ್ರಕಾರ ವಿರೋಧ ಪಕ್ಷಗಳೆಲ್ಲಾ ಒಂದುಸೇರಿ ರೈತರ ಚಳುವಳಿಗೆ ಬೆಂಬಲ, ಪೋಲೀಸ್ ದೌರ್ಜನ್ಯದ ಖಂಡನೆ, ಬೆಲೆಏರಿಕೆಯ ವಿರುದ್ಧ ತೀವ್ರ ಪ್ರತಿಭಟನೆಗಳನ್ನು ನಡೆಸಲು ಮುಂದಾಗಿವೆ, ಸಭೆ, ಮೆರವಣಿಗೆ ಮತ್ತು ಬಂದ್ ಕಾರ್ಯಾಚರಣೆಗಳು ನಡೆಯುತ್ತಲಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ ಪ್ರಾಂತ ರೈತಸಂಘ ಮತ್ತು ಇತರ ಸಾಮೂಹಿಕ ಸಂಘಟನೆಗಳು ಧಾರವಾಡ ರೈತರ ಚಳುವಳಿಗೆ ಸಂಪೂರ್ಣ ಬೆಂಬಲವಿತ್ತಿರುವವರಲ್ಲದೆ, ರಾಜ್ಯದಾದ್ಯಂತ ನಡೆಯುತ್ತಲಿರುವ ಹೋರಾಟಗಳಲ್ಲಿ ಸಕ್ರೀಯವಾದಿ ಭಾಗವಹಿಸುತ್ತಲಿವೆ,

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸಭೆಯು ಜುಲೈ 18, 19, 20ರಂದು ತುಮಕೂರಿನಲ್ಲಿ ಸೇರಿ ಬೆಲೆಏರಿಕೆ ವಿರುದ್ಧವೂ, ಪೋಲೀಸ್ ದೌರ್ಜನ್ಯ ವಿರುದ್ಧವೂ ಹೋರಾಡಲು ಕರೆ ಇತ್ತಿದೆ, ಪಕ್ಷದ ಎಲ್ಲಾ ಘಟಕಗಳೂ ಜನರ ಸಮಸ್ಯೆಗಳ ಬಗ್ಗೆ ಹೋರಾಡಲು ಮುಂದಾಗಬೇಕು. ರಾಜ್ಯದ ಎಲ್ಲಾ ಎಡ ಪ್ರಜಾಪ್ರಭುತ್ವ ಶಕ್ತಿಗಳು ಜನತೆಯಲ್ಲಿರುವ ಅತೃಪ್ತಿಯನ್ನು ತಿಳಿದುಕೊಂಡು, ಇಂದಿನ ರಾಜ್ಯವ್ಯಾಪ್ತಿಯಾದಿ ತಿಳಿಯುತ್ತಲಿರುವ ಚಳುವಳಿಕ್ಕೆ ರಾಜ್ಯಮಟ್ಟದಲ್ಲಿ ನಾಯಕತ್ವವನ್ನೀಯುಬೇಕು. ವಿಧಾನಸೌಧದೊಳಗೆ ಮಾತ್ರ ವಿರೋಧ ಪಕ್ಷಗಳ ಶಾಸಕರು ಮತ್ತು ಮುಖಂಡರುಗಳು ಗದ್ದಲಮಾಡಿದರೆ ಸಾಲದು. ಜನರ ಸಮಸ್ಯೆಗಳ ಪರಿಹಾರಕ್ಕಾಗಿ, ಜನತೆಯ ಸಂಘಟಿತ ಹೋರಾಟದಲ್ಲಿ ಕಾರ್ಯಕ್ರಮದ ಆಧಾರದಲ್ಲಿ ಒಂದುಗೂಡಿ ಜನತೆಯ ಹೋರಾಟ ಬೆಳೆಸಬೇಕು. ರಾಜ್ಯದಲ್ಲೊಂದು ಎಡಪ್ರಜಾಪ್ರಭುತ್ವ ಬದಲಿಯನ್ನು ಬೆಳೆಸುವುದೂ ಇದರಿಂದ ಸಾಧ್ಯ.

●

ಸಂಪಾದಕೀಯ

(1ನೇ ಪುಟದಿಂದ)

ಇಷ್ಟೆಲ್ಲಾ ಆದರೂ, ಸಮಸ್ಯೆ ಪರಿಹಾರದ ಬಗ್ಗೆ ಏನೇನೂ ಮಾಡದೆ, ಶಾಂತಯುತವಾಗಿ ಚಳುವಳಿ ನಡೆಸುತ್ತಲಿದ್ದ ರೈತರ ಮೇಲೂ, ಹಾಗೆಯೇ ಬೆಲೆಏರಿಕೆ ವಿರುದ್ಧ ಪ್ರತಿಭಟಿಸುತ್ತಲಿದ್ದ ಜನತೆಯ ಮೇಲೂ ಗುಂಡು ಹಾರಿಸಿ ನರಮೇಧ ನಡೆಸಿದ್ದನ್ನು ಸಮರ್ಥಿಸುವ ಮುಖ್ಯಮಂತ್ರಿಯ ನಿಲುಮೆಯು ಖಂಡನೀಯ. ಜನತೆಯ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಸರ್ಕಾರದ ಜವಾಬ್ದಾರಿಗಳನ್ನು ತಿಳಿದುಕೊಂಡು, ಸಮಸ್ಯೆಗಳ ಪರಿಹಾರದತ್ತ ಗಮನಕೊಡದೆ ಹೋರಾಡುವ ಜನತೆಯನ್ನು ಗುಂಡಿಕ್ಕಿ ಕೊಲ್ಲುವ ಧೋರಣೆಯು ಮುಂದುವರಿದಲ್ಲಿ ಈಗ ಭುಗಿಲೆದ್ದಿರುವ ಅತೃಪ್ತಿ ಮತ್ತು ಜನತೆಯ ಹೋರಾಟಗಳು ಸರಕಾರವನ್ನೇ ಉರುಳಿಸಿಯಾವು.

ಶ್ರೀಲಂಕಾದಲ್ಲಿ ತುರ್ತುಸ್ಥಿತಿ ಜಾರಿ

(1ನೇ ಪುಟದಿಂದ)

ಸಾರ್ವಜನಿಕ ಸಾಲ 35,475 ಮಿಲಿಯನ್ ರೂಗಳಷ್ಟಿದೆ. ಹಣದುಬ್ಬರ ಮಟ್ಟ ಈ ವರ್ಷ ಶೇಕಡಾ 35ರಷ್ಟಕ್ಕೆ ಏರುವ ನಿರೀಕ್ಷೆ ಇದೆ,

"ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳದಿದ್ದರೆ ಹಣದುಬ್ಬರದ ಮಟ್ಟವು 1983ರ ಹೊತ್ತಿಗೆ ಶೇ. 100ರನ್ನು ಮುಟ್ಟಲಿದೆ" ಎಂದು ಆ ದೇಶದ ಹಣಕಾಸು ಮಂತ್ರಿ ಎಚ್ಚರಿಕೆ ನೀಡಿದ್ದಾರೆ. ಇದಲ್ಲದೆ, ಎಲ್ಲ ಸರಕುಗಳ ಬೆಲೆ ವಿಪರೀತ ಹೆಚ್ಚುತ್ತಿರುವ ಸಮಯದಲ್ಲಿ ಸರ್ಕಾರವು ಅಹಾರ ಸಬ್ಸಿಡಿ ನೀಡಿಕೆಯನ್ನು ಹಿಂತೆಗೆದುಕೊಂಡಿದೆ.

ವಿಶ್ವಬ್ಯಾಂಕ್-ಹಣಕಾಸುನಿಧಿಗಳ ಆದೇಶದ ಮೇರೆಗೆ ಶ್ರೀಲಂಕಾಸರ್ಕಾರ ಇಂಥ ನೀತಿಗಳನ್ನು ಅನುಸರಿಸಿರುವುದರಿಂದಲೇ ಶ್ರೀಸಾಮಾನ್ಯನಿಗೆವಿಪರೀತ ಏಟು ತಗಲಿದೆ, ಇಂಥ ವಿಷಾದನೀಯ ಆರ್ಥಿಕ ಪರಿಸ್ಥಿತಿಯಿಂದ ಉಂಟಾಗುವ ಅಸಮಾಧಾನವನ್ನು ಹತ್ತಿಕ್ಕಲುಸರ್ಕಾರ ಜನತೆಯ ಪ್ರಜಾಪ್ರಭುತ್ವವಾದಿ ಹಕ್ಕುಗಳನ್ನು ದಮನ ಮಾಡಲು ನಿರ್ಧರಿಸಿದೆ.

ಶ್ರೀಲಂಕಾದ ಪರಿಸ್ಥಿತಿಯು, ಹೊಸದಾಗಿ ಸ್ವತಂತ್ರವಾದ ಅನೇಕ ಅಭಿವೃದ್ಧಿಶೀಲ ದೇಶಗಳ ಸ್ಥಿತಿಗಿಂತ ಭಿನ್ನವಾಗೇನು ಇಲ್ಲ. ದಿವಾಳಿ ಬಂಡವಾಳಶಾಹಿ ಹಾದಿಯನ್ನು ಅನುಸರಿಸಲು, ಈ ದೇಶಗಳ ಬಂಡವಾಳಶಾಹಿ -ಭೂಮಾಲೀಕ ಸರ್ಕಾರಗಳು ವಿದೇಶಿ ಹಣಕಾಸು ಬಂಡವಾಳದ ಮೇಲೆಯೇ ಹೆಚ್ಚು ಅವಲಂಬಿತವಾಗಿರುತ್ತಾರಾದ್ದರಿಂದ, ಜನತೆಯ ಅಸಮಾಧಾನದ ಸವಾಲನ್ನು ಎದುರಿಸಲು ಸರ್ವಾಧಿಕಾರ ತರುತ್ತವೆ.

ಆದರೆ ತಮ್ಮ ಸದ್ಯದ ವೇತನಗಳನ್ನು ಕಾಯ್ದುಕೊಳ್ಳಲು ಕಾರ್ಮಿಕ ಮತ್ತು ಜನತೆ ನಡೆಸುವ ಹೋರಾಟವನ್ನು ದಮನಕಾರಿ ಕ್ರಮಗಳಿಂದಲೂ ಹತ್ತಿಕ್ಕಲು ಸಾಧ್ಯವಿಲ್ಲ. ಜುಲೈ 18ರಿಂದ ಶೇ. 60ಕ್ಕೂ ಹೆಚ್ಚು ಕಾರ್ಮಿಕರು ಶ್ರೀಲಂಕಾದ ತುರ್ತುಸ್ಥಿತಿ ಕಾಯಿದೆಗಳನ್ನು ಧಿಕ್ಕರಿಸಿ ಮುಷ್ಕರಕ್ಕೆ ಸೇರಿದ್ದಾರೆ.

●

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ,
ಒಂದು ವರ್ಷಕ್ಕೆ	:	25 ರೂ,

ಕೋಟೇಶ್ವರದಲ್ಲಿ ಕೃಷಿಕೂಲಿಗಾರರ ಸಭೆ

ದ.ಕ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕೋಟೇಶ್ವರಗ್ರಾಮದಲ್ಲಿ ಸ್ಥಳೀಯ ರೈತಸಂಘದ ಮುಖಂಡತ್ವದಲ್ಲಿ ತಾ. 24-7-80ರಂದು ಕೃಷಿಕೂಲಿಗಾರರ ಸಭೆಯು ಸ್ಥಳೀಯ ಗ್ರಾಮಪಂಚಾಯತ್ ಉಪಾಧ್ಯಕ್ಷರಾದ ಶ್ರೀ ದಾಸ್ ಭಂಡಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ದಕ್ಷಿಣ ಕನ್ನಡ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಶ್ರೀ ಅಬ್ರಹಾಂ ಕರ್ಕಡರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ರೈತ, ಕೃಷಿಕೂಲಿಗಾರರ ಸಂಘಟನೆಯ ಮಹತ್ವದ ಬಗ್ಗೆ ಮಾತನಾಡಿದರು.

ಭತ್ತದ ಕೊಯಿಲಿನ ಸಂದರ್ಭದಲ್ಲಿ ಕನಿಷ್ಟ 8 ಸೇರು ಭತ್ತ ಮತ್ತು ಕಳೆ ಕೀಳುವ ಸಮಯದಲ್ಲಿ 1 ಸೇರು ಅಕ್ಕಿಯನ್ನು ಕೂಲಿಯಾಗಿ ಪಡೆಯತಕ್ಕದ್ದು ಎಂಬ ಮಹತ್ವದ ನಿರ್ಣಯವನ್ನು ಸಭೆಯಲ್ಲಿ ಅಂಗೀಕರಿಸಲಾಯಿತು. ಈ ಬೇಡಿಕೆ ಈಡೇರದಿದ್ದಲ್ಲಿ ಹೋರಾಟ ಮಾಡಬೇಕಾದೀತು ಎಂಬ ಎಚ್ಚರಿಕೆಯನ್ನೂ ಸಭೆ ನೀಡಿತು.

ಸಭೆಯಲ್ಲಿ ಸ್ಥಳೀಯವಾಗಿ ಕೆಲಸ ನಿರ್ವಹಿಸಲು ಮಹಿಳೆಯರನ್ನೇ ಒಳಗೊಂಡ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಗಿ, ಅದರ ಕಾರ್ಯದರ್ಶಿನಿಯರನ್ನಾಗಿ ಶ್ರೀಮತಿಯರಾದ ಸೀತ ಮತ್ತು ಗಂಗೆಯವರುಗಳನ್ನು ನೇಮಿಸಲಾಯಿತು. ಸಮಿತಿಯಲ್ಲಿ ಶ್ರೀಮತಿಯರಾದ ಮಂಜಿ ಗಂಗ, ಬಚ್ಚಿ, ಸೀತು, ಹೋಟೆಲ್ ಸೀತ, ಲಕ್ಷ್ಮಿ, ದುರ್ಗಿ, ದ್ಯಾವ ಹೆಂಗ್ಸು, ಚೆಂದು, ಗುಡ್ಡಿ ಚೆಂದು, ಮಾಚಿ, ನಾಗು, ಚಿಕ್ಕು ಮತ್ತು ಪುಟ್ಟಿಯವರುಗಳು ಇದ್ದಾರೆ.

●

ರೈತಸಂಘ ಪ್ರಾಂತ ಮಂಡಲಿ ಸಭೆಗೆ ಕಾಂ. ಚಾತುನ್ನಿ ಮಾಸ್ತರ್

ಆಗಸ್ಟ್ 12, 13 ಮತ್ತು 14ರಂದು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದ ಡಿ-ಕ್ರಾಸಿನ ಅಣ್ಣಪ್ಪಶೆಟ್ಟಿ ಛತ್ರದಲ್ಲಿ ನಡೆಯಲಿರುವ ಪ್ರಾಂತ ರೈತಸಂಘದ ರಾಜ್ಯಮಂಡಳಿ ಸಭೆಯಲ್ಲಿ ಅಖಿಲ ಭಾರತ ಕಿಸಾನ್‌ಸಭಾದ ಪ್ರಧಾನ ಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ತರ್, ಎಂ. ಪಿ. ಅವರು ಭಾಗವಹಿಸಲಿರುವರು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT